

# ಪರಿಸರ ಅಧ್ಯಯನ

## ತರಗತಿ IV

## ಭಾಗ 1

**ENVIRONMENTAL STUDIES**
**Kannada Medium**
**Part-1**
**STD-4**


ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2025




# ರಾಷ್ಟ್ರ ಗೀತೆ

ಜನಗಣಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ಬಂಗಾ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

# ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪೂರ್ಣ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

**State Council of Educational Research and Training (SCERT) Kerala**
Vidyabhavan, Poojappura, Thiruvananthapuram, Kerala - 695 012
Website : www.scert.kerala.gov.in
E-mail : scertkerala@gmail.com
Phone : 0471 - 2341883, Fax : 0471 - 2341869
Typesetting and Layout : SCERT
First Edition : 2024
Printed at : KBPS, Kakkanad, Kochi-30
© Department of General Education, Government of Kerala



ಗೆಳೆಯರೇ,

ನಾವು ವಾಸಿಸುವ ಭೂಮಿ ಮತ್ತು ಅದರ ಸೌಂದರ್ಯವೂ ನಮಗೆ ಇಷ್ಟವಾದದ್ದು. ತಿಳಿಯಲು, ಸಂಶೋಧಿಸಲು ಪ್ರೇರಣೆ ನೀಡುವ ಅದೆಷ್ಟೋ ವಿಸ್ಮಯಗಳು ನಮ್ಮ ಸುತ್ತುಮುತ್ತಲಿವೆ! ವಿವಿಧ ವ್ಯವಸ್ಥೆಗಳಲ್ಲಿ ಪರಸ್ಪರ ಅವಲಂಬಿಸಿ ಬದುಕುವ ಅನೇಕ ಜೀವಿಗಳು....

ಪ್ರಕೃತಿಯ ವರ್ಣವೈವಿಧ್ಯವನ್ನು ಪ್ರದರ್ಶಿಸುವ ಪಕ್ಷಿಗಳು...

ಅನಂತವಾಗಿರುವ ಆಕಾಶ, ಅಸಂಖ್ಯಾತ ಆಕಾಶಕಾಯಗಳು..

ಪರಿಸರದಲ್ಲಿ ವಿವಿಧ ರೂಪದಲ್ಲಿರುವ ವಸ್ತುಗಳು...

ಇವುಗಳ ಕುರಿತು ಹೆಚ್ಚೆಚ್ಚು ನಿರೀಕ್ಷಿಸಿಯೂ ವಿವರಗಳನ್ನು ಸಂಗ್ರಹಿಸಿಯೂ ಹೋಲಿಕೆ ಮಾಡಿಯೂ ಪ್ರಯೋಗಗಳನ್ನು ಮಾಡಿಯೂ ಸ್ವಯಂ ಜ್ಞಾನ ಪಡೆಯಲು ಈ ಪುಸ್ತಕವು ನಿಮಗೆ ಸಹಕರಿಸುವುದು.

ಜೊತೆಗೆ ನಾಡನ್ನೂ ಸಮಾಜವನ್ನೂ ತಿಳಿಯಲಿರುವ ಧಾರಾಳ ಅವಕಾಶಗಳು ಈ ಪುಸ್ತಕದಲ್ಲಿವೆ.

ಪರಿಸರವನ್ನೂ ಜನ್ಮಭೂಮಿಯನ್ನೂ ರಕ್ಷಿಸಲು ನೂತನ ತಿಳುವಳಿಕೆಗಳು ಸಹಕಾರಿಯಾಗಲಿ.

ಶುಭಾಶಯಗಳೊಂದಿಗೆ,

**ಡಾ. ಜಯಪ್ರಕಾಶ್ ಆರ್.ಕೆ**

ಡೈರೆಕ್ಟರ್

ಎಸ್.ಸಿ.ಇ.ಆರ್.ಟಿ. ಕೇರಳ.



# Textbook Development Team

**Advisor**

**Dr. Salahudheen Kunju A.**
Principal (Rtd.), University College,
Thiruvananthapuram

**Chairperson**

**Dr. Theresa Susan A.**
Professor, Head & Dean (Rtd.)
Dept. of Education, Kerala University

**Experts**

**Nandakumar B.**
Principal (Rtd.),
DIET Ernakulam

**Mukundan Pottamel**
Senior Lecturer (Rtd.)
DIET Malappuram

**Dr. K.Geetha Lekshmi**
Senior Lecturer (Rtd.),
DIET Thiruvananthapuram

**Members**

**Rajendrakumar N.S.**
B.P.O. (Rtd.), B.R.C. Konni, Pathanamthitta

**Aji T.S.**
Headmaster (Rtd.), Govt. L.P.School,
Oroottambalam, Thiruvananthapuram

**Dhanya P.J.**
L.P.S.T., Govt. L.P. School, Amarambalam,
Malappuram

**Thomas P.**
L.P.S.T., Govt. L.P. School, Kavalam,
Alappuzha

**Manilal T.L.**
U.P.S.T. (Rtd.), Govt. H.S., Adimali, Idukki

**Reeshma T.**
U.P.S.T., M.D.P.S.U.P. School, Ezhoor,
Thirur, Malappuram

**Rekha P.**
U.P.S.T., A.U.P. School, Perumbara,
Malappuram

**Raseena Salam**
L.P.S.T. Govt. L.P. School,
Panmanamanayil, Chavara, Kollam

**Artists**

**Suhail Raj**
Student, S.B.H.S.S., Changanasseri

**Gireesh Peruva**
Artist, Govt. U.P. School, Thalappuzha,
Wayanad

**C.N.Raju**
Artist (Rtd.), K.B.P.S. Kakkanad,
Ernakulam

**Kannada Translation**

**Experts**

**Dr. Aradhana N**
Asst. Professor (Chemistry)
Payyanur College.

**Yatheeshkumar Rai K**
Principal (Rtd.)
G.H.S.S Bellur.

**Gopalakrishna P**
Headmaster (Rtd.)
S.R.A.U.P School, Kubanoor.

**Members**

**Raju Stiven Crasta B**
LPST, Holy Family A.S.B.S Kumbla.

**Ashoka Kumar K**
LPST, G.L.P.S Badaje.

**Kamalaksha Nayak K**
LPST, G.W.L.P.S Kajampady.

**Reshma M**
LPST, G.S.B.S Kumbla.

**Bhagyashree M S**
LPST, G.W.L.P.S Kajampady.

**Academic Co.ordinator**

**Dr. Bindu S**
Research Officer, SCERT

State Council of Educational Research and Training (SCERT) Kerala
Vidyabhavan, Poojappura, Thiruvananthapuram - 695 012

# ಒಳಪುಟಗಳಲ್ಲಿ




1. ಜೀವಿಗಳು ಮತ್ತು ಪರಿಸರ 07

2. ನನ್ನ ದೇಶ ಭಾರತ 26

3. ರೆಕ್ಕೆಗಳಿರುವ ಗೆಳೆಯರು 48

4. ಕಲಾಕೇರಳ 68


ಈ ಪುಸ್ತಕದಲ್ಲಿ ಸೌಕರ್ಯಕ್ಕಾಗಿ ಕೆಲವು ಸಂಕೇತಗಳನ್ನು ಉಪಯೋಗಿಸಲಾಗಿದೆ.

- ಹೆಚ್ಚಿನ ಓದಿದಾಗಿ
- ಐ.ಸಿ.ಟಿ ಸಾಧ್ಯತೆ
- ಮೌಲ್ಯಮಾಪನ
- ಮುಂದುವರಿದ ಚಟುವಟಿಕೆ

# ಭಾರತದ ಸಂವಿಧಾನ

## ಪ್ರಸ್ತಾವನೆ

**ಭಾರತದ ಜನಗಳಾದ ನಾವು** ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ ;**

ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ ;**

ಸ್ಥಾನಮಾನ ಹಾಗೂ ಅವಕಾಶ **ಸಮಾನತೆ ;**

ದೊರೆಯುವಂತೆ ಮಾಡಲು ;

ಮತ್ತು ವ್ಯಕ್ತಿ ಗೌರವವನ್ನು, [2][ ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ;

ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲುವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ'' ಎಂಬ ಪದಗಳ ಬದಲಾಗಿ (3.1.1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ'' ಎಂಬ ಪದಗಳ ಬದಲಾಗಿ (3.1.1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# ಜೀವಿಗಳು ಮತ್ತು ಪರಿಸರ

# 1

**20.08.2024**

ಇಂದು ಪರಿಸರ ನಿರೀಕ್ಷಣೆಗಾಗಿ ನಾವು ತಾವರೆ ಕೊಳವನ್ನು ಆಯ್ಕೆ ಮಾಡಿಕೊಂಡೆವು. ಬಯಲಿನ ಬದಿಯಲ್ಲಿ ಸಂಚರಿಸಿ ಕೊಳದ ಬಳಿಗೆ ತಲುಪಿದೆವು. ಕೊಳದ ದಡದಲ್ಲಿರುವ ಮರದ ನೆರಳಿನಲ್ಲಿ ನಿಂತು ಪರಿಸರ ನಿರೀಕ್ಷಣೆ ಮಾಡಿದೆವು. ತಿಳಿಯಾದ ನೀರು. ತಾವರೆಗಳು ಅರಳಿ ನಿಂತಿವೆ. ಕೆಲವು ಜಲೀಯ ಸಸ್ಯಗಳು, ಹಾವಸೆ, ಮರದಿಂದ ಉದುರಿ ಬಿದ್ದ ಎಲೆಗಳು ಇತ್ಯಾದಿಗಳನ್ನು ನೀರಿನಲ್ಲಿ ಕಾಣಬಹುದು. ಕೊಳದ ದಡದಲ್ಲಿ ಹುಲ್ಲು, ಗಿಡಬಳ್ಳಿಗಳು, ಪೊದರುಗಳು ಬೆಳೆದು ನಿಂತಿವೆ.



**ಕೊಳದ ದಡದಲ್ಲಿರುವ ನೇರಳೆ ಮರದಲ್ಲಿ ಹಕ್ಕಿಗಳು, ಅಳಿಲು, ಮರ ಓತಿ, ಜೇಡ ಎಂಬಿವುಗಳೂ ಇರುವೆ ಮೊದಲಾದ ಸಣ್ಣ ಜೀವಿಗಳೂ ಇವೆ. ಕೊಳದ ತುಂಬಾ ಮೀನುಗಳಿದ್ದವು. ಅವುಗಳು ಆಗಾಗ ನೀರಿನ ಮೇಲ್ಭಾಗಕ್ಕೆ ಬಂದು ಬಾಯಿ ತೆರೆಯುತ್ತಿದ್ದವು. ಕಪ್ಪೆ, ತೊಂದೆಕಪ್ಪೆ, ಏಡಿ, ಬಸವನಹುಳ, ನೀರೊಳ್ಳೆ ಮುಂತಾದ ಜಲಜೀವಿಗಳು ತಾವರೆಕೊಳದಲ್ಲಿ ಇದ್ದವು. ಕೊಳಕ್ಕೆ ಸಣ್ಣ ಕಲ್ಲುಗಳನ್ನು ಎಸೆದು, ಅಲೆಗಳನ್ನು ಎಬ್ಬಿಸಿ ನಾವು ಆಡಿದೆವು. ಕೊಳದ ದಡದ ತಂಪಾದ ವಾತಾವರಣದಲ್ಲಿ ಹೊತ್ತು ಸರಿದದ್ದು ತಿಳಿಯಲೇ ಇಲ್ಲ.**

ರೈನಾಳ ನಿರೀಕ್ಷಣಾ ಟಿಪ್ಪಣಿಯನ್ನು ಓದಿದಿರಲ್ಲವೇ.

ಕೊಳದಲ್ಲಿ ಯಾವೆಲ್ಲ ಜೀವಿಗಳನ್ನು ನೋಡಿದರು?

ಮರದಲ್ಲಿ ಕಂಡುಬಂದ ಜೀವಿಗಳು ಯಾವುವು?

ಎಲ್ಲಾ ಜೀವಿಗಳಿಗೂ ವಾಸಿಸಲು ಸ್ಥಳ ಅಗತ್ಯವಿಲ್ಲವೇ?

ನೀರಿನಲ್ಲಿ ವಾಸಿಸುವ ಜೀವಿಗಳಿಗೆ ನೆಲದಲ್ಲಿ ವಾಸಿಸಲು ಸಾಧ್ಯವಿದೆಯೇ?

ಮೀನುಗಳಿಗೆ ನೆಲದಲ್ಲಿ ವಾಸಿಸಲು ಯಾಕೆ ಸಾಧ್ಯವಾಗುವುದಿಲ್ಲ?

ನಿಮ್ಮ ಊಹೆಯನ್ನು ಹೇಳಿರಿ.

ಮೀನುಗಳಿಗೆ ನೀರಿನಲ್ಲಿ ವಾಸಿಸಲು ಸಹಾಯಕವಾದ ಯಾವೆಲ್ಲ ವಿಶೇಷತೆಗಳನ್ನು ನೀವು ನಿರೀಕ್ಷಣೆ ಮಾಡಿರುವಿರಿ?

ಒಂದು ಮೀನಿನ ಚಿತ್ರವನ್ನು ರಚಿಸಿರಿ.



ಮೀನಿನ ಆಕಾರ ಯಾವ ರೀತಿಯಲ್ಲಿದೆ?

ಈ ಆಕಾರವು ನೀರಿನ ಮೂಲಕ ಸಂಚರಿಸಲು ಹೇಗೆ ಸಹಕರಿಸುತ್ತದೆ?

ದೋಣಿಗಳ ಆಕಾರವನ್ನು ನಿರೀಕ್ಷಿಸಿರಿ.





ನೀರಿನ ಮೂಲಕ ಸಂಚರಿಸಲು ಇದರಲ್ಲಿ ಹೆಚ್ಚು ಸೂಕ್ತವಾದ ಆಕಾರ ಯಾವುದು?

ಮೀನುಗಳು ಸಂಚರಿಸುವುದನ್ನು ನೀವು ಗಮನಿಸಿದ್ದೀರಾ?

ಅವುಗಳು ಸಂಚಾರದ ದಿಕ್ಕನ್ನು ಹೇಗೆ ಬದಲಾಯಿಸುತ್ತವೆ?

ಅವುಗಳ ಶಲ್ಕಗಳು ಹೇಗೆ ಕ್ರಮೀಕರಿಸಲ್ಪಟ್ಟಿವೆ?

ಮೀನುಗಳಿಗೆ ಉಸಿರಾಡಲು ಸಹಾಯಕವಾದ ಶರೀರಭಾಗ ಯಾವುದು?

ಮೀನುಗಳಿಗೆ ನೀರಿನಲ್ಲಿ ಜೀವಿಸಲು ಸಹಾಯಕವಾದ ಯಾವೆಲ್ಲ ವಿಶೇಷತೆಗಳಿವೆ?

ಮೀನುಗಳಿಗೆ ತಮ್ಮ ಶರೀರದ ಆಕಾರ, ರೆಕ್ಕೆಗಳು, ಬಾಲದ ರೆಕ್ಕೆ, ಶಲ್ಕಗಳ ಕ್ರಮೀಕರಣ, ಜಾರುವ ಸ್ವಭಾವ ಎಂಬಿವುಗಳು ನೀರಿನ ಮೂಲಕ ಸಂಚರಿಸಲು ಸಹಕಾರಿಯಾಗಿವೆ. ಮೀನುಗಳು ಕಿವಿರುಗಳ ಮೂಲಕ ಉಸಿರಾಡುತ್ತವೆ.

ಮೀನುಗಳ ವಿವಿಧ ವಿಶೇಷತೆಗಳನ್ನು ತಿಳಿದಿರಲ್ಲವೇ? ಇದೇ ರೀತಿಯಲ್ಲಿ ವಿಶೇಷತೆಗಳಿರುವ ಸಸ್ಯಗಳೂ ಇವೆ. ಅವುಗಳನ್ನು ಪರಿಚಯಿಸಿಕೊಳ್ಳೋಣ.

**ಚಿತ್ರಗಳನ್ನು ನಿರೀಕ್ಷಿಸಿರಿ.**





ಈ ಸಸ್ಯಗಳ ವಿಶೇಷತೆಗಳು ಯಾವುವು?

ಕಾಂಡದ ಪ್ರತ್ಯೇಕತೆ ಏನು?

ಇವುಗಳಿಗೆ ಇತರ ಸಸ್ಯಗಳಿಗಿಂತ ಭಿನ್ನವಾಗಿ ಯಾವೆಲ್ಲಾ ವಿಶೇಷತೆಗಳಿವೆ?

ಚರ್ಚೆ ಮಾಡಿ **ನನ್ನ ಪರಿಸರ ಅಧ್ಯಯನ ಪುಸ್ತಕ**ದಲ್ಲಿ ಬರೆಯಿರಿ.

## ಮರುಭೂಮಿಯ ಸಸ್ಯಗಳು (ಶುಷ್ಕ ಸಸ್ಯಗಳು)

**ಮರುಭೂಮಿಯಲ್ಲಿರುವ ಸಸ್ಯಗಳು ಎಲೆಯಿಲ್ಲದಿರುವವುಗಳೋ, ಸಣ್ಣ ಎಲೆಯಿರುವವುಗಳೋ, ಮುಳ್ಳುಗಳಿರುವವುಗಳೋ ಆಗಿರಬಹುದು. ಅವುಗಳ ಕಾಂಡಗಳು ದಪ್ಪವಾಗಿ ಹಸುರು ಬಣ್ಣದಲ್ಲಿದ್ದು ನೀರನ್ನು ಸಂಗ್ರಹಿಸಿಡಲು ಸಾಧ್ಯವಿರುವವುಗಳಾಗಿವೆ. ಕಾಂಡಗಳಿಗೆ ಮಯಣದಂತಹ ಒಂದು ಆವರಣವಿದೆ. ಈ ಆವರಣವು ನೀರು ನಷ್ಟವಾಗುವುದನ್ನು ತಡೆಯಲು ಅವುಗಳಿಗೆ ಸಹಕರಿಸುತ್ತದೆ. ತುಂಬಾ ಆಳಕ್ಕೆ ಇಳಿಯುವ ಸಾಮರ್ಥ್ಯವಿರುವ ಅವುಗಳ ಬೇರುಗಳು ಆಳದಿಂದಲೂ ನೀರನ್ನು ಹೀರಬಲ್ಲವುಗಳಾಗಿವೆ. ಮರುಭೂಮಿಯ ಸಸ್ಯಗಳನ್ನು ಶುಷ್ಕ ಸಸ್ಯಗಳು (Xerophytes) ಗಳೆಂದು ಕರೆಯುತ್ತಾರೆ. ಮೇಲೆ ತಿಳಿಸಿದ ವಿಶೇಷತೆಗಳಿಂದಾಗಿ ಅವುಗಳಿಗೆ ಮರುಭೂಮಿಯಲ್ಲಿ ಬದುಕಲು ಸಾಧ್ಯವಾಗುತ್ತದೆ.**

### ಹೊಂದಾಣಿಕೆ (Adaptation)

ಸಸ್ಯಗಳಿಗೂ ಪ್ರಾಣಿಗಳಿಗೂ ಅವುಗಳು ಜೀವಿಸುವ ಪರಿಸರಕ್ಕೆ ಹೊಂದಿಕೊಂಡು ಸೂಕ್ತವಾದ ಶಾರೀರಿಕ ವಿಶೇಷತೆಗಳಿವೆ. ಒಂದು ಜೀವಿಗೆ ಅದರ ವಾಸಸ್ಥಳದಲ್ಲಿ ಜೀವಿಸಲು ಸಹಾಯಕವಾದ ಶಾರೀರಿಕ ವಿಶೇಷತೆಯನ್ನು ಹೊಂದಾಣಿಕೆ ಎನ್ನುವರು.




ನೈದಿಲೆ ಮತ್ತು ಕಪ್ಪೆಯ ಸಂಭಾಷಣೆಯನ್ನು ಗಮನಿಸಿದಿರಲ್ಲವೇ.

ಅವುಗಳ ಇನ್ನಷ್ಟು ಹೊಂದಾಣಿಕೆಗಳನ್ನು ಚರ್ಚೆ ಮಾಡಿ ಬರೆಯಿರಿ.

| ನೈದಿಲೆ | ಕಪ್ಪೆ |
|---|---|
| • | • |
| • | • |

## ವಿಭಿನ್ನ ವಾಸಸ್ಥಳಗಳು

ಚಿತ್ರಗಳನ್ನು ನಿರೀಕ್ಷಿಸಿರಿ.
ಚಿತ್ರಗಳಲ್ಲಿರುವ ಜೀವಿಗಳು ಎಲ್ಲಿ ವಾಸಿಸುತ್ತವೆ?





ನಿಮಗೆ ಪರಿಚಿತವಾದ ಇತರ ಜೀವಿಗಳ ಹೆಸರುಗಳನ್ನು ಕಂಡುಹುಡುಕಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ನೆಲದಲ್ಲಿ ವಾಸಿಸುವವುಗಳು | ನೀರಿನಲ್ಲಿ ವಾಸಿಸುವವುಗಳು | ನೆಲದಲ್ಲಿಯೂ ನೀರಿನಲ್ಲಿಯೂ ವಾಸಿಸುವವುಗಳು |
|---|---|---|
| | | |
| | | |
| | | |
| | | |

ಪೂರ್ತಿಗೊಳಿಸಿದ ಪಟ್ಟಿಯಲ್ಲಿರುವ ವಿವರಗಳನ್ನು ಪರಸ್ಪರ ಚರ್ಚೆ ಮಾಡಿ ನಿಗಮನಗಳನ್ನು **ನನ್ನ ಪರಿಸರ ಅಧ್ಯಯನ ಪುಸ್ತಕ**ದಲ್ಲಿ ದಾಖಲಿಸಿರಿ.

ಮರುಭೂಮಿಯಲ್ಲಿಯೂ ಧ್ರುವಪ್ರದೇಶಗಳಲ್ಲಿಯೂ ಜೀವಿಗಳು ವಾಸಿಸುತ್ತವೆಯಲ್ಲವೇ!

ಅವುಗಳಿಗೆ ಇರುವ ಹೊಂದಾಣಿಕೆಗಳು ಯಾವುವು?






ಒಂಟೆ ಮತ್ತು ಪೆಂಗ್ವಿನ್ ಗಳ ಇತರ ಹೊಂದಾಣಿಕೆಗಳನ್ನು ಕಂಡುಹಿಡಿದು ಚರ್ಚೆ ಮಾಡಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಒಂಟೆ | ಪೆಂಗ್ವಿನ್ |
|---|---|
| • | • |
| • | • |
| • | • |

## ನೀರು ಕುಡಿಯದೆಯೂ ಒಂದು ಬದುಕು

### ಕಂಗಾರು ಇಲಿ



ಕಂಗಾರು ಇಲಿಯು ಮರುಭೂಮಿಯಲ್ಲಿ ಕಾಣಸಿಗುವ ಒಂದು ಸಣ್ಣ ಜೀವಿಯಾಗಿದೆ. ಮರುಭೂಮಿಯಲ್ಲಿ ಜೀವಿಸಲು ಅಗತ್ಯವಾದ ಅನೇಕ ಹೊಂದಾಣಿಕೆಗಳು ಈ ಜೀವಿಗಿದೆ. ಹಗಲು ಹೊತ್ತಿನ ಬಿಸಿಲಿನಿಂದ ರಕ್ಷಣೆ ಪಡೆಯಲು ತುಂಬಾ ಆಳವಾದ ಬಿಲಗಳನ್ನು ಮಾಡಿ ಅದರೊಳಗೆ ಜೀವಿಸುತ್ತದೆ. ರಾತ್ರಿಯ ಹೊತ್ತಿನಲ್ಲಿ ಆಹಾರ ಹುಡುಕುತ್ತದೆ. ಇವುಗಳಿಗೆ ಸ್ವಲ್ಪವೂ ನೀರನ್ನು ಕುಡಿಯದೆಯೇ ಜೀವಿಸಲು ಸಾಧ್ಯವಿದೆ. ಪ್ರಧಾನ ಆಹಾರವಾದ ಧಾನ್ಯಗಳಿಂದಲೂ ಬೀಜಗಳಿಂದಲೂ ಶರೀರದ ಕೊಬ್ಬಿನಿಂದಲೂ ಇವುಗಳಿಗೆ ಅಗತ್ಯವಾದ ನೀರು ಲಭಿಸುವುದು. ಬೆವರು ಮತ್ತು ಮೂತ್ರದ ರೂಪದಲ್ಲಿ ಉಂಟಾಗುವ ನೀರಿನ ನಷ್ಟವು ತೀರಾ ಕಡಿಮೆ. ಉದ್ದವಾದ ಹಿಂದಿನ ಕಾಲುಗಳನ್ನು ಉಪಯೋಗಿಸಿಕೊಂಡು ಕಂಗಾರುಗಳ ರೀತಿಯಲ್ಲಿ ಹಾರಿ ಹಾರಿ ಸಂಚರಿಸುತ್ತವೆ. ಕೆನ್ನೆಯ ಬದಿಯಲ್ಲಿರುವ ಚೀಲದಲ್ಲಿ ಧಾನ್ಯ ಮತ್ತು ಬೀಜಗಳನ್ನು ಸಂಗ್ರಹಿಸಿಡಲು ಸಾಧ್ಯವಿದೆ.




ಕೊಕ್ಕರೆಗೆ ಬಯಲಿನಿಂದ ಏನೆಲ್ಲಾ ಲಭಿಸುತ್ತದೆ?

- ಚಿಕ್ಕಜೀವಿಗಳು
-
-

ಮೀನಿಗೆ ಕೊಳದಿಂದ ಏನೆಲ್ಲಾ ಲಭಿಸುತ್ತದೆ?

- ವಾಸಸ್ಥಳ
-
-

**ಒಂದು ಜೀವಿಯು ವಾಸಿಸುವ ಪರಿಸರವು ಅದರ ವಾಸಸ್ಥಳ ಅಥವಾ ಆವಾಸ (Habitat) ಆಗಿದೆ. ಜೀವಿಯ ಅಸ್ತಿತ್ವಕ್ಕೆ ಅಗತ್ಯವಾದ ಎಲ್ಲಾ ಘಟಕಗಳು ಆವಾಸದಲ್ಲಿವೆ. ಕೊಳ, ಹೊಳೆ, ಬಯಲು ಇತ್ಯಾದಿಗಳು ಆವಾಸಗಳಿಗೆ ಉದಾಹರಣೆಗಳಾಗಿವೆ.**

ವಾಸಸ್ಥಳಗಳಿಗೆ ಇನ್ನಷ್ಟು ಉದಾಹರಣೆಗಳನ್ನು ಚರ್ಚೆಯ ಮೂಲಕ ಕಂಡುಹಿಡಿದು ಬರೆಯಿರಿ.

- ಮರ
-
-

## ವಿವಿಧ ರೀತಿಯ ಆವಾಸಗಳು

**ಚಿತ್ರವನ್ನು ನಿರೀಕ್ಷಿಸಿರಿ.**



ಚಿತ್ರದಲ್ಲಿ ಕಂಡುಬರುವ ವಿವಿಧ ರೀತಿಯ ಆವಾಸಗಳು ಯಾವುವು? ಹೆಸರುಗಳನ್ನು ಬರೆದು ನೋಡಿರಿ.

ಬಯಲು ಒಂದು ಆವಾಸವಾಗಿದೆಯಲ್ಲವೇ? ಅದರಲ್ಲಿ ಜೀವವಿರುವ ಮತ್ತು ಜೀವವಿಲ್ಲದ ಅನೇಕ ಘಟಕಗಳಿವೆ. ಅವುಗಳು ಯಾವುವು? ಚರ್ಚಿಸಿ ಬರೆಯಿರಿ.

| ಜೀವವಿರುವವುಗಳು | ಜೀವವಿಲ್ಲದವುಗಳು |
|---|---|
| • ಸಸ್ಯಗಳು | • ಮಣ್ಣು |
| • | • |
| • | • |

ಪ್ರಕೃತಿದತ್ತವಾದ ಆವಾಸಗಳು ಮತ್ತು ಮಾನವನಿರ್ಮಿತ ಆವಾಸಗಳು ಇವೆ. ಕಾಡು ಪ್ರಕೃತಿದತ್ತ ಆವಾಸಕ್ಕೆ ಉದಾಹರಣೆಯಾಗಿದೆ. **ಶಾಲೆಯ ಜೈವವೈವಿಧ್ಯ ಉದ್ಯಾನವೋ?**

ಪ್ರಕೃತಿದತ್ತವಾದ ಆವಾಸಗಳಿಗೂ ಮಾನವ ನಿರ್ಮಿತ ಆವಾಸಗಳಿಗೂ ಇನ್ನಷ್ಟು ಉದಾಹರಣೆಗಳನ್ನು ಕಂಡುಹಿಡಿದು ಬರೆಯಿರಿ.

| ಪ್ರಕೃತಿದತ್ತ ಆವಾಸಗಳು | ಮಾನವನಿರ್ಮಿತ ಆವಾಸಗಳು |
|---|---|
| • | • |
| • | • |
| • | • |

**ಒಂದು ಆವಾಸದಲ್ಲಿ ಜೀವವಿರುವ ಮತ್ತು ಜೀವವಿಲ್ಲದ ಅನೇಕ ಘಟಕಗಳಿವೆ. ಸಸ್ಯಗಳು, ಪ್ರಾಣಿಗಳು, ಸೂಕ್ಷ್ಮಜೀವಿಗಳು ಇತ್ಯಾದಿಗಳು ಜೀವವಿರುವ ಘಟಕಗಳಿಗೆ ಉದಾಹರಣೆಗಳಾಗಿವೆ. ಮಣ್ಣು, ವಾಯು, ಜಲ, ಸೂರ್ಯಪ್ರಕಾಶ ಮೊದಲಾದವುಗಳು ಜೀವವಿಲ್ಲದ ಘಟಕಗಳಲ್ಲಿ ಪ್ರಧಾನವಾದವುಗಳು.**

ವಾಯು, ಜಲ, ಮಣ್ಣು, ಸೂರ್ಯಪ್ರಕಾಶ ಮೊದಲಾದ ಜೀವವಿಲ್ಲದ ಘಟಕಗಳನ್ನು ಜೀವಿಗಳು ಅವಲಂಬಿಸಿಕೊಂಡಿವೆಯಲ್ಲವೇ? ಇದೇ ರೀತಿ ಜೀವಿಗಳು ಕೂಡ ಪರಸ್ಪರ ಅವಲಂಬಿಸಿಕೊಂಡಿವೆ. ಒಂದು ಪ್ರದೇಶದಲ್ಲಿ ಜೀವವಿರುವ ಘಟಕಗಳು ಮತ್ತು ಜೀವವಿಲ್ಲದ ಘಟಕಗಳು ಪರಸ್ಪರ ಅವಲಂಬಿಸಿಕೊಂಡು ಇರುತ್ತವೆ.

**ಚಿತ್ರವನ್ನು ನಿರೀಕ್ಷಿಸಿರಿ.**

ಯಾರು ಯಾರನ್ನೆಲ್ಲ ಅವಲಂಬಿಸುತ್ತಾರೆ? ಗೆರೆ ಎಳೆದು ಜೋಡಿಸಿ ಟಿಪ್ಪಣಿ ತಯಾರಿಸಿರಿ.



### ಆವಾಸವ್ಯವಸ್ಥೆ (Ecosystem)

ಜೀವವಿರುವ ಘಟಕಗಳು ಮತ್ತು ಜೀವವಿಲ್ಲದ ಘಟಕಗಳು ಪರಸ್ಪರ ಅವಲಂಬಿಸಿಕೊಂಡು ಬದುಕುವ ಪರಿಸರವೇ ಆವಾಸವ್ಯವಸ್ಥೆ. ಮರಗಳು, ಬಯಲು, ಕೊಳ, ತೊರೆ, ಗುಡ್ಡ, ಬನ ಮೊದಲಾದವುಗಳು ಸಣ್ಣ ಆವಾಸವ್ಯವಸ್ಥೆಗಳಾಗಿವೆ. ಕಾಡು, ಹುಲ್ಲುಗಾವಲು, ಮರುಭೂಮಿ, ಸಮುದ್ರ, ಧ್ರುವಪ್ರದೇಶ ಎಂಬಿವುಗಳು ದೊಡ್ಡ ಆವಾಸವ್ಯವಸ್ಥೆಗಳಾಗಿವೆ.

ಒಂದು ಆವಾಸವ್ಯವಸ್ಥೆಯಲ್ಲಿ ಪರಸ್ಪರಾವಲಂಬನೆ ಯಾವೆಲ್ಲ ರೀತಿಯಲ್ಲಿವೆ?

ಉದಾಹರಣೆ ಸಹಿತ ಸ್ಪಷ್ಟಪಡಿಸಿರಿ.

- ಜೀವವಿರುವ ಘಟಕಗಳು ಮತ್ತು ಜೀವವಿಲ್ಲದ ಘಟಕಗಳೊಳಗೆ
- 
- 

## ಆವಾಸವ್ಯವಸ್ಥೆಗಳ ನಾಶ

### ಗುಡ್ಡಕ್ಕೂ ಹೇಳಲಿಕ್ಕಿದೆ

ನಮ್ಮೂರಿನಲ್ಲಿ ಹಲವು ಕಡೆಗಳಲ್ಲಿ ನಮ್ಮನ್ನು ಕಾಣಬಹುದು. ನಮ್ಮನ್ನು ಏರದವರು ಯಾರಾದರೂ ಇದ್ದೀರಾ? ಎರೆಹುಳದಿಂದ ತೊಡಗಿ ಗುಳ್ಳೆನರಿಯ ವರೆಗೆ ಅದೆಷ್ಟೋ ಜೀವಿಗಳಿಗೆ ಮತ್ತು ವೈವಿಧ್ಯಮಯ ಸಸ್ಯಗಳಿಗೆ ನಾವು ವಾಸಸ್ಥಳವನ್ನು ಒದಗಿಸುತ್ತೇವೆ. ನಾವು ಮಳೆನೀರನ್ನು ಸಂಗ್ರಹಿಸಿಡುತ್ತೇವೆ. ನಂತರ ಬಾವಿಗಳಿಗೂ ತೊರೆಗಳಿಗೂ ಬಯಲುಗಳಿಗೂ ಆ ನೀರನ್ನು ನೀಡುತ್ತೇವೆ. ಗಾಳಿಯನ್ನು ನಿಯಂತ್ರಿಸಲು ಮತ್ತು ಸೆಕೆಯನ್ನು ಕಡಿಮೆ ಮಾಡಲು ನಮಗೆ ಸಾಧ್ಯ.

ನೋಡಿದಿರಾ!ನಾವು ಇಂದು ದೊಡ್ಡ ಸಂದಿಗ್ಧತೆಯಲ್ಲಿದ್ದೇವೆ. ನಮ್ಮ ಪ್ರಾಧಾನ್ಯವನ್ನು ಮನುಷ್ಯರು ತಿಳಿದುಕೊಂಡಿರುವರೇ?



ಗುಡ್ಡದ ಸ್ವಗತವನ್ನು ಓದಿದಿರಲ್ಲವೇ?

ಗುಡ್ಡಗಳು ನಾಶವಾದರೆ ಯಾವ ಯಾವ ತೊಂದರೆಗಳಿವೆ?

ಆವಾಸವ್ಯವಸ್ಥೆಗೆ ತೊಂದರೆಯಾಗಿ ಪರಿಣಮಿಸುವ ಮಾನವನ ಹಸ್ತಕ್ಷೇಪಗಳು ಯಾವುವೆಂದು ಚರ್ಚೆ ಮಾಡಿ ಬರೆಯಿರಿ.

- **ಗುಡ್ಡಗಳನ್ನು ಅಗೆಯುವುದು.**
- **ಕೀಟನಾಶಕಗಳ ಅಮಿತ ಉಪಯೋಗ.**
- 
- 
- 

# ಮಲಿನೀಕರಣ

**ಎರೆಹುಳ ಹೇಳುವುದನ್ನು ಗಮನಿಸಿರಿ.**




ಎರೆಹುಳದ ಮಾತನ್ನು ಗಮನಿಸಿದಿರಲ್ಲವೇ.

ನಿಮ್ಮ ಮನೆಯಲ್ಲೂ ಸುತ್ತಮುತ್ತಲ ಪರಿಸರದಲ್ಲೂ ಕಾಣುವ ಮಾಲಿನ್ಯಗಳು ಯಾವುವು?

ನಿಮ್ಮ ಶಾಲೆಯಲ್ಲಿ ಆಹಾರತ್ಯಾಜ್ಯಗಳನ್ನು ಹೇಗೆ ಸಂಸ್ಕರಿಸುವರು ಎಂದು ಕಂಡುಹಿಡಿದು ಒಂದು ವರದಿ ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.

ಚಿತ್ರಗಳನ್ನು ನಿರೀಕ್ಷಿಸಿರಿ.





ಮಾಲಿನ್ಯಗಳನ್ನುಸುತ್ತುಮುತ್ತಲ ಪ್ರದೇಶಗಳಲ್ಲಿಎಸೆಯುವುದು ಆವಾಸಗಳಿಗೆ ತೊಂದರೆಯಲ್ಲವೇ?

ಮಣ್ಣನ್ನು ಮಲಿನಗೊಳಿಸುವ ಇತರ ಚಟುವಟಿಕೆಗಳು ಯಾವುವೆಂದು ಚರ್ಚೆ ಮಾಡಿ ಬರೆಯಿರಿ.

- ಕೃಷಿಸ್ಥಳಗಳಲ್ಲಿ ಅಮಿತವಾದ ಕೀಟನಾಶಕಗಳನ್ನು ಉಪಯೋಗಿಸುವುದು.
- ಅಮಿತವಾದ ರಾಸಾಯನಿಕ ಗೊಬ್ಬರಗಳ ಬಳಕೆ.
- 
- 

ಮಣ್ಣಿನ ಮಲಿನೀಕರಣವು ಆವಾಸವ್ಯವಸ್ಥೆಯನ್ನು ಯಾವೆಲ್ಲ ರೀತಿಯಲ್ಲಿ ಬಾಧಿಸುವುದು? ಚರ್ಚೆ ಮಾಡಿ **ನನ್ನ ಪರಿಸರ ಅಧ್ಯಯನ ಪುಸ್ತಕ**ದಲ್ಲಿ ಬರೆಯಿರಿ.

ಇದೇ ರೀತಿಯಲ್ಲಿ ನಮ್ಮ ಪರಿಸರದಲ್ಲಿ ಬೇರೆ ಏನೆಲ್ಲ ಮಲಿನಗೊಳ್ಳುತ್ತಿವೆ?

ಚಿತ್ರಗಳನ್ನು ನಿರೀಕ್ಷಿಸಿ ವಾಯುಮಾಲಿನ್ಯದ ಸಂದರ್ಭಗಳು ಯಾವುವೆಂದು ಕಂಡುಹಿಡಿಯಿರಿ.









ವಾಯುಮಾಲಿನ್ಯದಿಂದ ಆಗುವ ತೊಂದರೆಗಳು ಯಾವುವೆಂದು ಚರ್ಚೆ ಮಾಡಿ ಬರೆಯಿರಿ.

**ವಾಯುಮಾಲಿನ್ಯವು ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮವನ್ನುಂಟು ಮಾಡುತ್ತದೆ. ವಾಯುಮಾಲಿನ್ಯದಿಂದಾಗಿ ವಿವಿಧ ರೋಗಗಳು ಬಾಧಿಸಿ ಪ್ರತಿವರ್ಷ ಸುಮಾರು 70 ಲಕ್ಷ ಮನುಷ್ಯರು ಪ್ರಪಂಚದೆಲ್ಲೆಡೆ ಸಾವಿಗೀಡಾಗುತ್ತಾರೆ. ಮನುಷ್ಯರಿಗೆ ಮಾತ್ರವಲ್ಲದೇ ಪ್ರಾಣಿಗಳಿಗೂ ಸಸ್ಯಗಳಿಗೂ ವಾಯುಮಾಲಿನ್ಯವು ದೋಷಕರವಾಗಿ ಪರಿಣಮಿಸುತ್ತಿದೆ.**

**ಕೃಷಿಬೆಳೆಗಳು ಕಡಿಮೆಯಾಗುವುದು, ಆಮ್ಲ ಮಳೆ, ಜಾಗತಿಕ ಬಿಸಿ ಏರುವಿಕೆ, ಓಝೋನ್ ಪದರದ ನಾಶ ಎಂಬಿವುಗಳೆಲ್ಲ ವಾಯುಮಾಲಿನ್ಯದ ದುಷ್ಪರಿಣಾಮಗಳಾಗಿವೆ.**

**ಚಿತ್ರಗಳನ್ನು ನಿರೀಕ್ಷಿಸಿರಿ.**





ಜಲ ಮಲಿನವಾಗುವ ಸಂದರ್ಭಗಳು ಯಾವುವು?

ಜಲ ಮಲಿನೀಕರಣವು ಜೀವಿಗಳನ್ನು ಮತ್ತು ಮನುಷ್ಯರನ್ನು ಹೇಗೆ ಬಾಧಿಸುವುದು?

**ವಿವಿಧ ರಾಸಾಯನಿಕ ಮತ್ತು ಜೈವಿಕ ವಸ್ತುಗಳ ಸೇರ್ಪಡೆಯಿಂದಾಗಿ ನೀರು ಮಲಿನವಾಗುತ್ತಿದೆ. ಮಲಿನಜಲವು ವಿವಿಧ ಆರೋಗ್ಯ ಸಮಸ್ಯೆಗಳನ್ನೂ ರೋಗಗಳನ್ನೂ ಉಂಟುಮಾಡುತ್ತದೆ. ಕೈಗಾರಿಕಾ ಕೇಂದ್ರ ಮತ್ತು ಮನೆಗಳ ಮಾಲಿನ್ಯಗಳು, ಪ್ಲಾಸ್ಟಿಕ್ ಮಾಲಿನ್ಯಗಳು, ಕೀಟನಾಶಕಗಳು, ಇತರ ರಾಸಾಯನಿಕ ವಸ್ತುಗಳು, ಪೆಟ್ರೋಲಿಯಂ ಎಂಬಿವುಗಳು ಜಲಮಾಲಿನ್ಯಕ್ಕೆ ಕಾರಣಗಳಾಗಿವೆ. ಮಲಿನೀಕರಣದಿಂದಾಗಿ ನೀರಿನಲ್ಲಿ ಆಮ್ಲಜನಕದ ಪ್ರಮಾಣವು ಕಡಿಮೆಯಾಗುತ್ತದೆ. ಇದು ನೀರಿನಲ್ಲಿ ವಾಸಿಸುವ ಜೀವಿಗಳ ಪ್ರಾಣಕ್ಕೆ ಅಪಾಯಕಾರಿಯಾಗಿದೆ.**

ಆದಿಯ ದಿನಚರಿಯನ್ನು ಓದಿರಿ.

## ವಿಕೋಪಗೊಂಡ ಪ್ರಕೃತಿ

30-07-2024

ನಮ್ಮ ಮನೆ ಗುಡ್ಡದ ಇಳಿಜಾರಿನಲ್ಲಿತ್ತು. ಅದು ಚೆನ್ನಾಗಿ ಮಳೆ ಬೀಳುವ ಪ್ರದೇಶ. ಮುಂಗಾರು ಮಳೆ ಧಾರಾಕಾರವಾಗಿ ಸುರಿಯುತ್ತಿತ್ತು. ಹೊಳೆಯಲ್ಲಿ ನೀರಿನ ಮಟ್ಟ ಕೂಡ ಏರಿತ್ತು. ಇನ್ನೂ ನೀರಿನ ಮಟ್ಟ ಏರಿದರೆ ಮನೆಯೊಳಗೆ ನೀರು ಬರಬಹುದು. ಸಂಜೆಯಾಗುತ್ತಲೇ ಭೀಕರ ಮಳೆ ಸುರಿಯಲಾರಂಭಿಸಿತು. ವಿದ್ಯುತ್ ಕೂಡ ಇಲ್ಲ. ಇದೇ ರೀತಿ ಮಳೆ ಮುಂದುವರಿದರೆ ಏನಾಗಬಹುದೋ ಎಂಬ ಭಯವುಂಟಾಯಿತು. ಅಪಾಯದ ಮುನ್ಸೂಚನೆಗಳನ್ನು ನಾವು ಗಮನಿಸುತ್ತಿದ್ದೆವು. ಮನೆಯ ಸಾಕುಪ್ರಾಣಿಗಳು ಭೀತಿಯಿಂದ ಶಬ್ದ ಮಾಡುವುದು ಗಮನಕ್ಕೆ ಬಂತು. ಅಪಾಯವನ್ನು ಅರಿತುಕೊಂಡು ಅಪ್ಪ ಮತ್ತು ಅಮ್ಮ ನಮ್ಮನ್ನು ತುಸು ದೂರದಲ್ಲಿರುವ ಬಂಧುಗಳ ಮನೆಗೆ ಕರೆದೊಯ್ದರು. ಮಳೆಗೆ ವಿಶ್ರಾಂತಿಯಿಲ್ಲ. ನಾವು ಮಲಗಿದೆವು. ಮುಂಜಾನೆ ಹೊತ್ತಿಗೆ ನಾವು ಆ ಭಯಾನಕ ವಾರ್ತೆಯನ್ನು ಕೇಳಿದೆವು. ಗುಡ್ಡಕುಸಿತದಿಂದ ಅನೇಕ ಜನರು ಸಾವಿಗೀಡಾದರು. ಆ ಭೀಕರ ಪ್ರಕೃತಿ ದುರಂತದಿಂದ ನಮ್ಮ ಮನೆ, ಶಾಲೆ, ಅನೇಕ ಗೆಳೆಯ ಗೆಳತಿಯರು, ಬಂಧುಗಳು ಸೇರಿ ಇಡೀ ಗ್ರಾಮವೇ ಪೂರ್ಣವಾಗಿ ಇಲ್ಲದಾಯಿತು.





ಆದಿಯ ದಿನಚರಿಯನ್ನು ಓದಿದಿರಲ್ಲವೇ?

ಪ್ರಪಂಚದ ಹಲವೆಡೆಗಳಲ್ಲಿ ಪ್ರಕೃತಿ ವಿಕೋಪಗಳು ಸಂಭವಿಸುತ್ತವೆಯಲ್ಲವೇ?

ನಿಮಗೆ ತಿಳಿದಿರುವ ಪ್ರಕೃತಿ ವಿಕೋಪಗಳು ಯಾವುವು? ಕಂಡುಹಿಡಿದು ಬರೆಯಿರಿ.

- ಗುಡ್ಡ ಕುಸಿತ
- ಭೂಕಂಪ
- ಕಾಡ್ಗಿಚ್ಚು
-
-
-

ಪ್ರಕೃತಿ ದುರಂತಗಳು ಪರಿಸರಕ್ಕೂ ಜೀವಜಾಲಗಳಿಗೂ ದೊಡ್ಡ ಮಟ್ಟದಲ್ಲಿ ನಾಶನಷ್ಟವನ್ನು ಉಂಟುಮಾಡುತ್ತವೆ. ಸ್ವಾಭಾವಿಕ ಕಾರಣಗಳಿಂದಲೋ, ಮನುಷ್ಯನ ಹಸ್ತಕ್ಷೇಪದಿಂದಲೋ ಪ್ರಕೃತಿ ದುರಂತಗಳು ಉಂಟಾಗಬಹುದು.

ಕೊಲೇಷ್ ನಿರೀಕ್ಷಿಸಿರಿ.




ಇವುಗಳು ಯಾವುದರ ಕುರಿತಾಗಿರುವ ಮುನ್ಸೂಚನೆಗಳಾಗಿವೆ?

ನೆರೆ ಹಾವಳಿಯ ಮುನ್ಸೂಚನೆ ಲಭಿಸಿದಾಗ ಯಾವ ಯಾವ ಮುಂಜಾಗ್ರತೆಗಳನ್ನು ಸ್ವೀಕರಿಸಬೇಕು? ಸ್ನೇಹಿತರೊಂದಿಗೆ ಚರ್ಚೆ ಮಾಡಿ ನಿಮ್ಮ ಸಲಹೆಗಳನ್ನು ತರಗತಿಯಲ್ಲಿ ಮಂಡಿಸಿರಿ.

**ಇಂದು ಪ್ರಾಕೃತಿಕ ದುರಂತಗಳ ಕುರಿತು ಮುನ್ಸೂಚನೆಯನ್ನು ನೀಡುವ ವ್ಯವಸ್ಥೆಗಳಿವೆ. ಮುನ್ಸೂಚನೆಗಳ ಆಧಾರದಲ್ಲಿ ಮುಂಜಾಗ್ರತೆ ವಹಿಸಿದರೆ ಜೀವಕ್ಕೂ ಪರಿಸರಕ್ಕೂ ಸಂರಕ್ಷಣೆಯನ್ನು ನೀಡಲು ಸಾಧ್ಯವಾಗುವುದು.**

## ಆವಾಸವ್ಯವಸ್ಥೆಯ ಸಂರಕ್ಷಣೆ

ತೀರಪ್ರದೇಶ ಮತ್ತು ಕಡಲಿನಲ್ಲಿರುವ ಅಸಂಖ್ಯಾತ ಜೀವಿಗಳು... ಅವುಗಳು ಪ್ರಕೃತಿಯೊಂದಿಗೆ ಬೆರೆತು ಜೀವಿಸುವ ದೃಶ್ಯ ಎಷ್ಟೊಂದು ಮನೋಹರ! ಆವಾಸವ್ಯವಸ್ಥೆಗಳಿಂದ ಜೀವಿಗಳು ಅವುಗಳ ಆಹಾರ ಮತ್ತು ವಾಸಸ್ಥಳವನ್ನು ಕಂಡುಹಿಡಿಯುತ್ತವೆ. ಜೀವಿಗಳ ಅಸ್ತಿತ್ವಕ್ಕೆ ಆವಾಸವ್ಯವಸ್ಥೆಗಳೇ ಆಧಾರ. ಆವಾಸವ್ಯವಸ್ಥೆಗಳ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಲ್ಲವೇ? ಆವಾಸವ್ಯವಸ್ಥೆಯ ಸಂರಕ್ಷಣಾ ಚಟುವಟಿಕೆಗಳಲ್ಲಿ ನಾವೂ ಭಾಗವಹಿಸೋಣ.




## ಮೌಲ್ಯಮಾಪನ

1. ಜೀವಿಗಳನ್ನು ಅವುಗಳ ಆವಾಸದೊಂದಿಗೆ ಜೋಡಿಸಿರಿ.

| ಜೀವಿ | ಆವಾಸ |
|---|---|
| ತಿಮಿಂಗಿಲ | ವನ |
| ಪೆಂಗ್ವಿನ್ | ಸಮುದ್ರ |
| ಜಿಂಕೆ | ಮರುಭೂಮಿ |
| ಒಂಟೆ | ಧ್ರುವಪ್ರದೇಶ |

2. ನಿಮ್ಮ ಪ್ರದೇಶದ ಒಂದು ಆವಾಸವ್ಯವಸ್ಥೆಯನ್ನು ಸಂದರ್ಶಿಸಿ ಅಲ್ಲಿ ಕಂಡುಬರುವ ಜೀವಿಗಳ ಹೆಸರುಗಳನ್ನು ಬರೆಯಿರಿ. ಅವುಗಳೊಳಗಿನ ಪರಸ್ಪರಾವಲಂಬನೆಯನ್ನು ಕಂಡುಹಿಡಿಯಿರಿ.

3. ಕೆಳಗೆ ಕೊಟ್ಟಿರುವ ಜೀವಿಗಳನ್ನು ಅವುಗಳ ಹೊಂದಾಣಿಕೆಗಳೊಂದಿಗೆ ಗೆರೆ ಎಳೆದು ಜೋಡಿಸಿರಿ.

| | |
|---|---|
|  | ಕಿವಿರುಗಳ ಸಹಾಯದಿಂದ ಉಸಿರಾಡುತ್ತದೆ. |
|  | ಎಲೆಗಳಿಗೆ ಮಯಣದಂತಹ ವಸ್ತುವಿನ ಆವರಣವಿದೆ. |
|  | ಚರ್ಮದ ಮೂಲಕ ಉಸಿರಾಡುತ್ತದೆ. |
|  | ಕಾಂಡದಲ್ಲಿ ನೀರನ್ನು ಸಂಗ್ರಹಿಸಿಡಲು ಸಾಧ್ಯವಿದೆ. |
|  | ಮರಳಿನಲ್ಲಿ ಹೂತು ಹೋಗದ ಅಗಲವಾದ ಪಾದಗಳಿವೆ. |

## ಮುಂದುವರಿದ ಚಟುವಟಿಕೆ

1. ನಿಮ್ಮ ಮನೆ ಹಾಗೂ ಪರಿಸರದ 5 ಮನೆಗಳ ಮಾಲಿನ್ಯ ಸಂಸ್ಕರಣೆಯ ಮಾಹಿತಿಗಳನ್ನು ಕೆಳಗೆ ನೀಡಿದ ನಮೂನೆಯಲ್ಲಿ ಸಂಗ್ರಹಿಸಿರಿ. ಗುಂಪಿನಲ್ಲಿ ಚರ್ಚಿಸಿ ಒಂದು ವರದಿ ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.

### ಮಾಹಿತಿ ಸಂಗ್ರಹ ನಮೂನೆ

ಮನೆಯ ಹೆಸರು / ನಂಬ್ರ :

ಸಂದರ್ಶಿಸಿದ ದಿನಾಂಕ, ಸಮಯ :

ಮನೆಯ ಯಜಮಾನನ ಹೆಸರು :

| ಕ್ರ.ಸಂ | ವಿಭಾಗ | ಸಂಸ್ಕರಿಸುವ ವಿಧಾನ |
|---|---|---|
| 1 | ಜೈವ ಮಾಲಿನ್ಯ | • ಪರಿಸರದಲ್ಲಿ ಹೂತು ಹಾಕುವರು. ☐<br>• ರಸ್ತೆಗೆ ಎಸೆಯುವರು. ☐<br>• ಪೈಪ್ ಕಂಪೋಸ್ಟ್ ನಲ್ಲಿ ನಿಕ್ಷೇಪಿಸುವರು. ☐<br>• ಕಂಪೋಸ್ಟ್ ಹೊಂಡಕ್ಕೆ ಹಾಕುವರು. ☐<br>• ಬಯೋಬಿನ್ ಗೆ ಹಾಕುವರು. ☐<br>• ಬಯೋಗ್ಯಾಸ್ ಪ್ಲಾಂಟ್ ನಲ್ಲಿ ನಿಕ್ಷೇಪಿಸುವರು. ☐<br>• ಪ್ರಾಣಿಗಳಿಗೆ ನೀಡುವರು. ☐<br>• ಬೇರೆ ವಿಧಾನಗಳು ........................................ |
| 2 | ಪ್ಲಾಸ್ಟಿಕ್ ಮಾಲಿನ್ಯ | • ಹರಿತ ಕರ್ಮ ಸೇನೆಯವರಿಗೆ ನೀಡುವರು. ☐<br>• ಮಣ್ಣಿನಲ್ಲಿ ಹೂತು ಹಾಕುವರು. ☐<br>• ಸಸ್ಯಗಳನ್ನು ನೆಡಲು ಉಪಯೋಗಿಸುವರು. ☐<br>• ಅಲಂಕಾರದ ವಸ್ತುಗಳನ್ನು ನಿರ್ಮಿಸುವರು. ☐<br>• ಪರಿಸರದಲ್ಲಿ ಎಸೆಯುವರು. ☐<br>• ಜಲಾಶಯಗಳಿಗೆ ಎಸೆಯುವರು. ☐<br>• ಬೆಂಕಿ ಹಾಕಿ ಉರಿಸುವರು. ☐<br>• ಬೇರೆ ವಿಧಾನಗಳು .................................... |
| 3 | ಜಲ ಮಾಲಿನ್ಯ | • ಮನೆ ಪರಿಸರದ ಕೃಷಿಗೆ ಉಪಯೋಗಿಸುವರು. ☐<br>• ಸೋಕ್ ಪಿಟ್ ಗೆ ಹಾಕುವರು. ☐<br>• ಚರಂಡಿಗೆ ಹಾಕುವರು. ☐<br>• ಜಲಾಶಯಗಳಿಗೆ ಹಾಕುವರು. ☐<br>• ಬೇರೆ ವಿಧಾನಗಳು .................................... |

2. ನೆಲದಲ್ಲೂ ನೀರಿನಲ್ಲೂ ಜೀವಿಸುವ ಜೀವಿಗಳ ಚಿತ್ರಗಳನ್ನು ಸಂಗ್ರಹಿಸಿ ಒಂದು ಡಿಜಿಟಲ್ ಆಲ್ಬಂ ತಯಾರಿಸಿರಿ.

# ನನ್ನ ದೇಶ ಭಾರತ

# 2



ತೇಜಸ್ ನ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಬಹಳ ವಿಜೃಂಭಣೆಯಿಂದ ನಡೆಯುತ್ತಿದೆ. ಇದರ ಅಂಗವಾಗಿ ಸಮಾಜ ವಿಜ್ಞಾನ ಸಂಘದ ನೇತೃತ್ವದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಮೇಘ ಟೀಚರ್ ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ ಪ್ರತಿ ಗುಂಪಿಗೂ ಒಂದೊಂದು ಜವಾಬ್ದಾರಿಯನ್ನು ನೀಡಿದರು.

ತೇಜಸ್ ಮತ್ತು ಅವನ ಗೆಳೆಯರ ಗುಂಪಿಗೆ ಸ್ವಾತಂತ್ರ್ಯ ದಿನದ ಕುರಿತಾದ ಸಂಚಿಕೆ ತಯಾರಿಸುವ ಜವಾಬ್ದಾರಿ ಲಭಿಸಿತು. ಸಂಚಿಕೆ ತಯಾರಿಕೆಗೆ ಅಗತ್ಯವಾದ ಮಾಹಿತಿಗಳನ್ನು ಸಂಗ್ರಹಿಸಲು ಅವರು ಗ್ರಂಥಾಲಯಕ್ಕೆ ತೆರಳಿದರು. ಗ್ರಂಥಾಲಯದ ಲೈಬ್ರರಿಯನ್ ಆಗಿರುವ ವಿನಯನ್ ಸರ್ ಕಳೆದ ವರ್ಷ ಅವರಿಗೆ ತರಗತಿ ಆಧ್ಯಾಪಕರಾಗಿದ್ದರು. ಗ್ರಂಥಾಲಯಕ್ಕೆ ತೆರಳಿದ ಅವರು ತಮ್ಮ ಅಧ್ಯಾಪಕರಲ್ಲಿ ತಾವು ಆಗಮಿಸಿದ ಉದ್ದೇಶವನ್ನು ವ್ಯಕ್ತಪಡಿಸಿದರು.



“ಮಕ್ಕಳೇ, ನಮ್ಮ ದೇಶವನ್ನು ಆಳಿದ ವಿದೇಶಿಯರು ಯಾರು ಎಂಬುದು ನಿಮಗೆ ತಿಳಿದಿದೆಯೇ?” ಎಂದು ವಿನಯನ್ ಸರ್ ಕೇಳಿದರು.

“ಬ್ರಿಟಿಷರು.” ಭವ್ಯಳು ಬಹಳ ಉತ್ಸುಕಳಾಗಿ ಉತ್ತರ ನೀಡಿದಳು.

“ಜಾಣೆ, ಆಗಲಿ. ಅವರು ನಮ್ಮ ಆಡಳಿತಾಧಿಕಾರಿಗಳಾಗಿ ಬದಲಾದ ರೀತಿ ಹೇಗೆ ಎಂಬುದು ನಿಮಗೆ ತಿಳಿದಿದೆಯೇ?” ಎಂದು ಅಧ್ಯಾಪಕರು ಕೇಳಿದಾಗ ಮಕ್ಕಳು ತಮಗರಿವಿಲ್ಲವೆಂಬಂತೆ ಮುಖ ಮುಖ ನೋಡಿದರು.

ಅಧ್ಯಾಪಕರು ಗ್ರಂಥಾಲಯದಿಂದ ಒಂದು ಚಿತ್ರಕಥೆಯ ಪುಸ್ತಕವನ್ನು ತೆಗೆದು ಅವರಿಗೆ ಓದಲು ನೀಡಿದರು.

ಮಕ್ಕಳು ಬಹಳ ಉತ್ಸಾಹದಿಂದ ಪುಸ್ತಕವನ್ನು ಓದಲಾರಂಭಿಸಿದರು.



1



ವಿದೇಶಿಯರು ನಮ್ಮ ದೇಶದಲ್ಲಿ ವ್ಯಾಪಕವಾಗಿ ಬೆಳೆಯುತ್ತಿದ್ದ ಏಲಕ್ಕಿ, ಕರಿಮೆಣಸು ಮೊದಲಾದ ಸುಗಂಧ ದ್ರವ್ಯಗಳನ್ನು ಹಾಗೂ ರೇಷ್ಮೆ, ಹತ್ತಿ ಮೊದಲಾದ ಬಟ್ಟೆ ಬರೆಗಳನ್ನು ಖರೀದಿಸಿ ವ್ಯಾಪಾರ ನಡೆಸಲು ಹಡಗುಗಳಲ್ಲಿ ಮೊತ್ತಮೊದಲು ಭಾರತ ದೇಶಕ್ಕೆ ಬಂದಿಳಿದರು.

2



ಅವರು ಹಂತ ಹಂತವಾಗಿ ನಮ್ಮ ರಾಜರುಗಳಿಂದ ಪ್ರತ್ಯೇಕ ಅನುಕೂಲತೆಗಳನ್ನು ಪಡೆದು ಇಲ್ಲಿ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಿದರು.

3



ಭಾರತದಲ್ಲಿದ್ದ ರಾಜರುಗಳು ಪರಸ್ಪರ ದ್ವೇಷದಿಂದ ಯುದ್ಧ ಮಾಡುತ್ತಿದ್ದ ಕಾರಣ ವಿದೇಶಿಯರಿಗೆ ಸುಲಭವಾಗಿ ತಮ್ಮ ಶಕ್ತಿಯನ್ನು ಹೆಚ್ಚಿಸಲು ಸಾಧ್ಯವಾಯಿತು.

4



ಫಿರಂಗಿ, ಬಂದೂಕು ಇತ್ಯಾದಿ ನವೀನ ರೀತಿಯ ಶಸ್ತ್ರಾಸ್ತ್ರಗಳನ್ನು ಹಾಗೂ ಯುದ್ಧ ತಂತ್ರಗಳನ್ನು ಉಪಯೋಗಿಸಿ ಜನರನ್ನು ತಮ್ಮ ವಶಕ್ಕೆ ತೆಗೆದುಕೊಂಡರು.

5



ಕ್ರಮೇಣ ಇಲ್ಲಿನ ಕೃಷಿ, ವ್ಯಾಪಾರ, ರಾಜರುಗಳು ಎಲ್ಲವೂ ವಿದೇಶಿಯರ ನಿಯಂತ್ರಣಕ್ಕೆ ಒಳಪಟ್ಟಿತು.

ದೇಶೀಯ ರಾಜ್ಯಗಳನ್ನು ಅವರು ತಮ್ಮ ವಶಕ್ಕೆ ಪಡೆದುಕೊಂಡರು.

6



ಕ್ರಮೇಣ ಭಾರತದ ಎಲ್ಲಾ ಪ್ರದೇಶಗಳಲ್ಲೂ ಬ್ರಿಟಿಷರು ತಮ್ಮ ಆಧಿಪತ್ಯ ಸ್ಥಾಪಿಸಿದರು. ಮುಂದಿನ ಇನ್ನೂರು ವರ್ಷಗಳಷ್ಟು ಕಾಲ ಭಾರತವು ಅವರ ಅಧೀನಕ್ಕೊಳಪಟ್ಟಿತು.



"ಚಿತ್ರಕಥೆ ಓದಿದಿರಲ್ಲವೇ? ಹಾಗಾದರೆ ನಾನು ಕೇಳುವಂತಹ ಕೆಲವು ಪ್ರಶ್ನೆಗಳಿಗೆ ನೀವು ಉತ್ತರ ನೀಡಬೇಕು." ಅಧ್ಯಾಪಕರು ಹೇಳಿದರು.

ಅಧ್ಯಾಪಕರ ಪ್ರಶ್ನೆಗಳಿಗೆ ನೀವು ಕೂಡ ಉತ್ತರವನ್ನು ಕಂಡುಹಿಡಿಯಿರಿ.

- ವಿದೇಶಿಯರು ಭಾರತಕ್ಕೆ ಯಾಕಾಗಿ ಆಗಮಿಸಿದರು?
- ವಿದೇಶಿಯರಿಗೆ ಭಾರತದಲ್ಲಿ ಅಧಿಕಾರವನ್ನು ಬಹಳ ಸುಲಭವಾಗಿ ಸ್ಥಾಪಿಸಲು ಹೇಗೆ ಸಾಧ್ಯವಾಯಿತು?
- ಬ್ರಿಟಿಷರೊಂದಿಗಿನ ಹೋರಾಟಗಳಲ್ಲಿ ಭಾರತೀಯರಿಗೆ ವಿರೋಧಿಸಿ ನಿಲ್ಲಲು ಸಾಧ್ಯವಾಗಲಿಲ್ಲ, ಕಾರಣಗಳೇನು?

## ಬ್ರಿಟಿಷರ ವಿರುದ್ಧ ನಡೆದ ಹೋರಾಟಗಳು

"ಓಹೋ! ಹಾಗಿದ್ದರೆ ಬ್ರಿಟಿಷ್ ಆಡಳಿತದಿಂದಾಗಿ ನಮ್ಮ ದೇಶದ ಜನರು ತುಂಬಾ ತೊಂದರೆಗಳನ್ನು ಅನುಭವಿಸಿದರು. ಅಲ್ಲವೇ ಸರ್?" ನೀನಾ ಕೇಳಿದಳು.

"ಹೌದು! ಬ್ರಿಟಿಷರ ದೌರ್ಜನ್ಯದಿಂದ ಬೇಸತ್ತ ಭಾರತೀಯರು ಅಲ್ಲಲ್ಲಿ ಒಟ್ಟುಗೂಡಿ ಅವರ ವಿರುದ್ಧ ಹೋರಾಟ ನಡೆಸಲು ಆರಂಭಿಸಿದರು. ಅಸಹಕಾರ ಧೋರಣೆಯೊಂದಿಗೆ ಕಾನೂನುಗಳನ್ನು ಉಲ್ಲಂಘಿಸಿ ಮೆರವಣಿಗೆಗಳನ್ನು ಮಾಡುವ ಮೂಲಕ ಪ್ರತಿಭಟಿಸಿದರು."

"ಈ ರೀತಿಯ ಪ್ರತಿಭಟನೆಗಳಲ್ಲವೇ **ಸ್ವಾತಂತ್ರ್ಯ ಹೋರಾಟ** ಎಂದು ಕರೆಯಲ್ಪಡುವುದು?" ಕೂಡಲೇ ನವೀನ ತನ್ನ ಸಂಶಯವನ್ನು ಅಧ್ಯಾಪಕರ ಮುಂದಿಟ್ಟನು.

"ಜಾಣ ಹುಡುಗ" ಅಧ್ಯಾಪಕರು ನವೀನನ ಬೆನ್ನು ತಟ್ಟಿ ಹೊಗಳಿದರು.

"ಇನ್ನು ನಾವು ಸ್ವಾತಂತ್ರ್ಯ ಹೋರಾಟದ ಕೆಲವು ಪ್ರಧಾನ ಘಟನೆಗಳನ್ನು ತಿಳಿಯೋಣ."

ಅಧ್ಯಾಪಕರು ಕಪಾಟಿನಿಂದ ಒಂದು ಪುಸ್ತಕವನ್ನು ತೆಗೆದು ಮಕ್ಕಳಿಗೆ ನೀಡಿದರು.

ಪುಸ್ತಕಗಳಿಂದ ಮಕ್ಕಳು ಸಂಗ್ರಹಿಸಿದ ವಿಷಯಗಳನ್ನು ಓದಿ ನೋಡಿರಿ.

## ಉಪ್ಪು ಸತ್ಯಾಗ್ರಹ (1930)

ಭಾರತದಲ್ಲಿ ಹಿಂದೆ ಹೆಚ್ಚಿನ ಜನರು ಸಮುದ್ರದ ನೀರನ್ನು ಬಾಷ್ಪೀಕರಿಸಿ ಉಪ್ಪು ಸಂಗ್ರಹಿಸುವ ಕೆಲಸದಲ್ಲಿ ತೊಡಗಿಕೊಂಡಿದ್ದರು. ಕ್ರೂರಿಗಳಾದ ಬ್ರಿಟಿಷ್ ಆಡಳಿತಾಧಿಕಾರಿಗಳು, ಭಾರತೀಯರು ಉಪ್ಪನ್ನು ತೆಗೆಯಲು ತೆರಿಗೆ (ಪ್ರತ್ಯೇಕ ಹಣ) ಯನ್ನು ಕಟ್ಟಬೇಕೆಂದು ಘೋಷಿಸಿದರು. ತೆರಿಗೆ ಕೊಡದೆ ಉಪ್ಪು ತೆಗೆಯುವವರಿಗೆ ಜೈಲು ಶಿಕ್ಷೆ ವಿಧಿಸಲಾಯಿತು. ಇದರ ವಿರುದ್ಧವಾಗಿ ಗಾಂಧೀಜಿಯವರು ಜನರನ್ನು ಒಟ್ಟು ಸೇರಿಸಿ ಪ್ರತಿಭಟಿಸಿದರು.

ಗಾಂಧೀಜಿಯವರ ಸಬರ್ಮತಿ ಆಶ್ರಮದಿಂದ ಬಹಳ ದೂರದಲ್ಲಿದ್ದ ದಂಡಿ ಸಮುದ್ರ ತೀರಕ್ಕೆ ಅವರು ಮೆರವಣಿಗೆಯ ಮೂಲಕ ತೆರಳಿದರು.





ದಂಡಿ ತೀರದಿಂದ ಒಂದು ಹಿಡಿ ಉಪ್ಪನ್ನು ಕೈಯಲ್ಲಿ ಬಾಚಿ ತೆಗೆದ ಗಾಂಧೀಜಿಯವರು ಹೀಗೆಂದರು. "ಉಪ್ಪನ್ನು ಹಿಡಿದ ಈ ಕೈಗಳನ್ನು ಕಡಿದರೂ ಈ ಮುಷ್ಟಿಯಲ್ಲಿರುವ ಉಪ್ಪನ್ನು ಬಿಟ್ಟುಕೊಡಲಾರೆ....."

ಉಪ್ಪು ಸತ್ಯಾಗ್ರಹದ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಗಳನ್ನು ಅಧ್ಯಾಪಕರ ಸಹಾಯದಿಂದ ಸಂಗ್ರಹಿಸಿರಿ.

- ಉಪ್ಪು ಸತ್ಯಾಗ್ರಹ ನಡೆದ ದಿನಾಂಕ ಹಾಗೂ ಸ್ಥಳ
- ಗಾಂಧೀಜಿಯವರ ನೇತೃತ್ವ
- ದಂಡಿ ಯಾತ್ರೆ

## ಕ್ವಿಟ್ ಇಂಡಿಯ ಚಳುವಳಿ (1942)

ಬಳಿಕ ಅಧ್ಯಾಪಕರು ಮಕ್ಕಳಿಗೆ ಒಬ್ಬ ಸ್ವಾತಂತ್ರ್ಯ ಸೇನಾನಿಯ ದಿನಚರಿಯನ್ನು ಪರಿಚಯಿಸಿ ಕೊಟ್ಟರು.

1942 ಆಗಸ್ಟ್ 8

ನನಗೆ ಇಂದು ಸ್ವಾತಂತ್ರ್ಯ ಹೋರಾಟದಲ್ಲಿ ಅತಿ ಹೆಚ್ಚು ಉತ್ಸಾಹ ಹಾಗೂ ಸ್ಫೂರ್ತಿ ಲಭಿಸಿದ ದಿನವಾಗಿತ್ತು. ಬೊಂಬೈಯಲ್ಲಿ ಜರಗಿದ ಇಂಡಿಯನ್ ನೇಶನಲ್ ಕಾಂಗ್ರೆಸ್ ಸಮ್ಮೇಳನದಲ್ಲಿ ಭಾಗವಹಿಸಿದೆನು. ಈ ಸಮ್ಮೇಳನದಲ್ಲಿ "ಕ್ವಿಟ್ ಇಂಡಿಯ" ಬೇಡಿಕೆಯನ್ನು ಮಂಡಿಸಲಾಯಿತು. ಈ ಘೋಷಣೆಯ ಅರ್ಥ "ಭಾರತವನ್ನು ಬಿಟ್ಟು ತೊಲಗಿರಿ" ಎಂದಾಗಿತ್ತು. ನಮಗೆ ಸ್ವಾತಂತ್ರ್ಯ ಲಭಿಸಲು ಬೇಕಾದ ಅತಿ ಪ್ರಬಲ ಹೋರಾಟ ಇದಾಗಬೇಕೆಂದು ಗಾಂಧೀಜಿಯವರು ಎಲ್ಲರನ್ನೂ ಉದ್ದೇಶಿಸಿ ಹೇಳಿದರು. "ಮಾಡು ಇಲ್ಲವೇ ಮಡಿ" ಎಂಬ ಗಾಂಧೀಜಿಯವರ ಹೋರಾಟದ ಆಹ್ವಾನವನ್ನು ಜನರೆಲ್ಲರೂ ಸ್ವೀಕರಿಸಿದರು. ಈ ಮಾತು ಕಿವಿಗೆ ಬೀಳುತ್ತಲೇ ನಾನು ನನಗರಿಯದೆ ಎದ್ದು ನಿಂತು ಮುಷ್ಠಿ ಬಿಗಿದು ಆ ಘೋಷಣೆಯನ್ನು ಕೂಗಿದೆ..

"ಕ್ವಿಟ್ ಇಂಡಿಯ... ಕ್ವಿಟ್ ಇಂಡಿಯ..."

ಗಾಂಧೀಜಿಯವರ ಆಹ್ವಾನವನ್ನು ಸ್ವೀಕರಿಸಿ, ಸಹಸ್ರಾರು ಮಂದಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರಬಹುದಲ್ಲವೇ ಸರ್?" ಎಂದು ತೇಜಸ್ ಕೇಳಿದನು.







"ಹಾ! ಹೌದು... ನಿಜವಾಗಿಯೂ ಭಾರತದೆಲ್ಲೆಡೆ ಈ ಸ್ವಾತಂತ್ರ್ಯ ಹೋರಾಟದ ಘೋಷಣೆ ಮೊಳಗಿತು. ಇದು ಜನರಿಗೆ ಹೆಚ್ಚಿನ ಸ್ಫೂರ್ತಿಯನ್ನು ನೀಡಿತು." ಅಧ್ಯಾಪಕರು ಹೇಳಿದರು.

ಕ್ವಿಟ್ ಇಂಡಿಯ ಚಳುವಳಿಯ ಕುರಿತು ಕೆಳಗೆ ಹೇಳಿರುವ ವಿವರಗಳನ್ನು ತರಗತಿ ಲೈಬ್ರರಿಯಿಂದ ಸಂಗ್ರಹಿಸಿ ಟಿಪ್ಪಣಿ ತಯಾರಿಸಿರಿ.

- ಕ್ವಿಟ್ ಇಂಡಿಯ ದಿನ.
- ನೇತೃತ್ವ ವಹಿಸಿದವರು.
- ಹೋರಾಟದಿಂದ ಉಂಟಾದ ಪರಿಣಾಮಗಳು.

## ಕೇರಳದಲ್ಲೂ ಸ್ವಾತಂತ್ರ್ಯ ಹೋರಾಟ



ಕೆ.ಕೇಳಪ್ಪನ್

"ಹಾಗಿದ್ದರೆ ಕೇರಳದಲ್ಲೂ ಸ್ವಾತಂತ್ರ್ಯ ಹೋರಾಟಗಳು ನಡೆದಿರಬಹುದಲ್ಲವೇ?" ನವೀನ್ ಕೇಳಿದನು.

"ಹೌದು.. ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟವು ಕೇರಳದಲ್ಲೂ ಪ್ರತಿಧ್ವನಿಸಿತು. ಕೇರಳದಲ್ಲಿ ಕಣ್ಣೂರಿನ ಪಯ್ಯನ್ನೂರು ಸಮುದ್ರ ತೀರದಲ್ಲಿ ಉಪ್ಪಿನ ಕಾನೂನನ್ನು ಉಲ್ಲಂಘಿಸಲಾಯಿತು. ಇದರ ನೇತೃತ್ವವನ್ನು ಕೆ.ಕೇಳಪ್ಪನ್ ರವರು ವಹಿಸಿದ್ದರು. ಮುಂದೆ ಎಲ್ಲರೂ ಅವರನ್ನು **'ಕೇರಳ ಗಾಂಧಿ'** ಎಂದು ಕರೆದರು."

"ಸ್ವಾತಂತ್ರ್ಯ ಹೋರಾಟಗಳಿಗೆ ಕೇರಳದಲ್ಲಿ ನೇತೃತ್ವ ನೀಡಿದ ಇತರ ಹೋರಾಟಗಾರರು ಯಾರೆಲ್ಲಾ ಸರ್?"

ಮಕ್ಕಳಲ್ಲಿ ಹೆಚ್ಚಿನ ವಿಷಯ ತಿಳಿಯಲು ಕುತೂಹಲ ಉಂಟಾಯಿತು.

"ನೂರಾರು ಮಂದಿ ಇದ್ದಾರೆ. ಟಿ.ಕೆ ಮಾಧವನ್, ಕೆ.ಪಿ ಕೇಶವ ಮೆನೋನ್, ಮುಹಮ್ಮದ್ ಅಬ್ದುರಹಮಾನ್, ಎ.ಕೆ ಗೋಪಾಲನ್, ಅಕ್ಕಮ್ಮ ಚೆರಿಯಾನ್, ಕುಟ್ಟಿಮಾಳು ಅಮ್ಮ ಮೊದಲಾದವರು." ಅಧ್ಯಾಪಕರು ನೆನಪಿಸುತ್ತ ಹೇಳಿದರು.



ಅಧ್ಯಾಪಕರು ಹೇಳಿದ ವಿಷಯಗಳನ್ನೆಲ್ಲ ಮಕ್ಕಳು ಪುಸ್ತಕದಲ್ಲಿ ದಾಖಲಿಸಿಟ್ಟರು.

ಕೇರಳದಲ್ಲಿ ನಡೆದ ಇತರ ಪ್ರಧಾನ ಸ್ವಾತಂತ್ರ್ಯ ಹೋರಾಟಗಳು ಯಾವುವೆಂದು ಕಂಡುಹಿಡಿದು ಬರೆಯಿರಿ.

- ಮಲಬಾರ್ ದಂಗೆ
-
-
-

# ಸ್ವಾತಂತ್ರ್ಯ ಹೋರಾಟಗಾರರು

## ಮಹಾತ್ಮ ಗಾಂಧಿ

"ಮಕ್ಕಳೇ! ಭಾರತದಾದ್ಯಂತ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿ ನೀಡಿದ ನೇತಾರ ಯಾರು ಎಂಬುದು ನಿಮಗೆ ತಿಳಿದಿದೆಯಲ್ಲವೇ" ಅಧ್ಯಾಪಕರು ಪ್ರಶ್ನೆ ಕೇಳಿದ ಕೂಡಲೇ ಮಕ್ಕಳೆಲ್ಲರೂ ಒಕ್ಕೊರಳಿನಿಂದ "ಗಾಂಧೀಜಿ" ಎಂಬ ಉತ್ತರವನ್ನು ನೀಡಿದರು.

ಗಾಂಧೀಜಿಯವರ ಕುರಿತು ಗ್ರಂಥಾಲಯದ ಪುಸ್ತಕಗಳಿಂದ ಸಂಗ್ರಹಿಸಿದ ಮಾಹಿತಿಗಳನ್ನು ಓದಿ ನೋಡಿರಿ.

**ಗಾಂಧೀಜಿಯವರು ಗುಜರಾತಿನ ಪೋರ್ ಬಂದರಿನಲ್ಲಿ ಜನಿಸಿದರು. ಅವರ ನಿಜವಾದ ಹೆಸರು ಮೋಹನದಾಸ ಕರಮಚಂದ ಗಾಂಧಿ ಎಂದಾಗಿತ್ತು. ಅವರು ದಕ್ಷಿಣ ಆಫ್ರಿಕಾದಲ್ಲಿ ವಕೀಲ ವೃತ್ತಿಯನ್ನು ತೊರೆದು ಭಾರತಕ್ಕೆ ಮರಳಿ ಬಂದು ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಸರಳ ಜೀವನ, ಉನ್ನತ ಚಿಂತನೆ ಹಾಗೂ ಸೌಹಾರ್ದಯುತ ವರ್ತನೆಯಿಂದಾಗಿ ಅವರು ಬಹಳ ಬೇಗನೆ ಭಾರತದ ಸ್ವಾತಂತ್ರ್ಯ ಹೋರಾಟದ ನಾಯಕರಾದರು. ಅವರ ಮಾತು ಮತ್ತು ನಡತೆಯಲ್ಲಿ ಸತ್ಯ ಹಾಗೂ ಅಹಿಂಸೆ ಎದ್ದು ಕಾಣುತ್ತಿತ್ತು. ಮಕ್ಕಳು ಅವರನ್ನು ಪ್ರೀತಿಯಿಂದ 'ಬಾಪೂಜಿ' ಎಂದು ಕರೆಯುತ್ತಿದ್ದರು. ಚಂಪಾರನ್ ಹೋರಾಟ (1917), ಅಸಹಕಾರ ಚಳುವಳಿ (1920), ಉಪ್ಪು ಸತ್ಯಾಗ್ರಹ (1930), ಕ್ವಿಟ್ ಇಂಡಿಯ ಚಳುವಳಿ (1942) ಮೊದಲಾದ ಸ್ವಾತಂತ್ರ್ಯ ಹೋರಾಟಗಳ ನೇತೃತ್ವ ವಹಿಸಿದರು.**









ಗಾಂಧೀಜಿಯವರ ಬಗ್ಗೆ ಹೆಚ್ಚಿನ ವಿಷಯಗಳನ್ನು ಶಾಲಾ ಗ್ರಂಥಾಲಯದ ಸಹಾಯದಿಂದ ಸಂಗ್ರಹಿಸಿ ಲಘು ವಿವರಣೆ ಬರೆಯಿರಿ. ಗುಂಪಿನಲ್ಲಿ "ಗಾಂಧಿ ಸಂಚಿಕೆ" ಯನ್ನು ತಯಾರಿಸಿರಿ.




## ಜವಹರಲಾಲ್ ನೆಹರು



“ಈಗ ನಾವು ಇನ್ನೊಬ್ಬರ ಪರಿಚಯ ಮಾಡಿಕೊಳ್ಳೋಣ. ಕೆಳಗೆ ನೀಡಿರುವ ಸೂಚನೆಗಳಿಂದ ಅವರು ಯಾರೆಂದು ಹೇಳಬಹುದೇ?” ಅಧ್ಯಾಪಕರು ಕೇಳಿದರು.

- ಸ್ವಾತಂತ್ರ್ಯ ಹೋರಾಟದಲ್ಲಿ ನೇತೃತ್ವವನ್ನು ವಹಿಸಿಕೊಂಡು ಗಾಂಧೀಜಿಯವರ ಜೊತೆ ಕೆಲಸ ಮಾಡಿದರು.
- ಭಾರತದ ಮೊದಲ ಪ್ರಧಾನಮಂತ್ರಿ ಆಗಿದ್ದರು.
- ಭಾರತವು ಸ್ವಾತಂತ್ರ್ಯ ಗಳಿಸಿದ ವಿಷಯವನ್ನು ಇವರು ಘೋಷಣೆ ಮಾಡಿದರು.
- ಮಕ್ಕಳು ಪ್ರೀತಿಯಿಂದ ಇವರನ್ನು "**ಚಾಚಾಜಿ**' ಎಂದು ಕರೆಯುತ್ತಿದ್ದರು.

ಎಲ್ಲರೂ ಒಟ್ಟಾಗಿ "ಜವಹರಲಾಲ್ ನೆಹರು' ಎಂಬ ಉತ್ತರವನ್ನು ನೀಡಿದರು.

ಜವಹರಲಾಲ್ ನೆಹರುರವರ ಬಗ್ಗೆ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯಿರಿ.



- ನೆಹರುರವರ ಜನ್ಮದಿನ ಯಾವಾಗ? ಈ ದಿನವನ್ನು ಯಾವ ಹೆಸರಿನಲ್ಲಿ ನಾವು ಆಚರಿಸುತ್ತೇವೆ?

- ನೆಹರುರವರ ಆತ್ಮಕಥೆಯ ಹೆಸರೇನು?

ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿ ಜವಹರಲಾಲ್ ನೆಹರುರವರ ಬಗ್ಗೆ ಭಾಷಣವನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಧಾನ ಪಾತ್ರ ವಹಿಸಿದ ಇತರ ಕೆಲವು ನಾಯಕರನ್ನು ಅಧ್ಯಾಪಕರು ಮಕ್ಕಳಿಗೆ ಪರಿಚಯಿಸಿಕೊಟ್ಟರು.


ಸುಭಾಷ್ ಚಂದ್ರ ಬೋಸ್


ಸರ್ದಾರ್ ವಲ್ಲಭ್ ಭಾಯಿ ಪಟೇಲ್


ಗೋಪಾಲಕೃಷ್ಣ ಗೋಖಲೆ


ಸರೋಜಿನಿ ನಾಯ್ಡು


ಬಾಲಗಂಗಾಧರ ತಿಲಕ್


ಭಗತ್ ಸಿಂಗ್


ಅರುಣ ಆಸಫ್ ಅಲಿ


ಖಾನ್ ಅಬ್ದುಲ್ ಗಫಾರ್ ಖಾನ್

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ನಾಯಕರ ಪರಿಚಯವಾಯಿತಲ್ಲವೇ.

ಕೆಳಗೆ ನೀಡಿದ ಸೂಚನೆಗಳನ್ನು ಓದಿ ನೇತಾರರನ್ನು ಕಂಡುಹಿಡಿದು ಬರೆಯಿರಿ.



| | |
|---|---|
| ಇಂಡಿಯನ್ ನೇಶನಲ್ ಕಾಂಗ್ರೆಸ್ ನ ಮೊದಲ ಮಹಿಳಾ ಅಧ್ಯಕ್ಷೆ. 'ಭಾರತದ ಕೋಗಿಲೆ' ಎಂದು ಪ್ರಸಿದ್ಧಿ ಪಡೆದಿದ್ದಾರೆ. | -------------------- |
| ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಆಯುಧಧಾರಿಯಾಗಿ ಹೋರಾಡಿದರು. ಇವರು ತಮ್ಮ 23ನೇ ವಯಸ್ಸಿನಲ್ಲಿ ನೇಣುಗಂಬಕ್ಕೆ ಏರಿಸಲ್ಪಟ್ಟರು. | -------------------- |
| 'ಕ್ವಿಟ್ ಇಂಡಿಯಾ ಚಳುವಳಿಯ ರಾಣಿ' ಎಂದೇ ಕರೆಯಲ್ಪಡುವ ಇವರು ಭಾರತದ ಸ್ವಾತಂತ್ರ್ಯ ಹೋರಾಟದ 'ಪೂಜ್ಯ ವಯೋವೃದ್ಧೆ' ಎಂದು ಪ್ರಸಿದ್ಧಿ ಪಡೆದವರು. | -------------------- |
| ದೇಶೀಯ ರಾಜ್ಯಗಳನ್ನು ಒಟ್ಟು ಸೇರಿಸಿ ಭಾರತದೇಶ ರೂಪಿಸುವಲ್ಲಿ ಪ್ರಧಾನ ಪಾತ್ರವಹಿಸಿದರು. 'ಭಾರತದ ಉಕ್ಕಿನ ಮನುಷ್ಯ' ಎಂದು ಖ್ಯಾತಿ ಪಡೆದವರು. | -------------------- |
| 'ಇಂಡಿಯನ್ ನೇಶನಲ್ ಆರ್ಮಿ' ಎಂಬ ಸಂಘಟನೆಯನ್ನು ರೂಪಿಸಿ ಬ್ರಿಟಿಷರ ವಿರುದ್ಧ ಹೋರಾಡಿದರು. ಇವರನ್ನು 'ನೇತಾಜಿ' ಎಂದು ಕರೆಯುವರು. | -------------------- |
| 'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು. ಅದನ್ನು ನಾನು ಪಡೆದೇ ತೀರುತ್ತೇನೆ.' ಎಂದು ಘೋಷಿಸಿದರು. ಲೋಕಮಾನ್ಯ ಎಂದು ಕರೆಯಲ್ಪಟ್ಟರು. | -------------------- |
| ಗಾಂಧೀಜಿಯವರನ್ನು ರಾಜಕೀಯಕ್ಕೆ ತಂದ ಗುರು. 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. | -------------------- |
| ಗಾಂಧೀಜಿಯವರ ಆದರ್ಶಗಳನ್ನು ಪಾಲಿಸಿದರು. 'ಗಡಿನಾಡ ಗಾಂಧಿ' ಎಂಬ ಹೆಸರಿನಲ್ಲಿ ಕರೆಯಲ್ಪಟ್ಟರು. | -------------------- |

ಇತರ ಸ್ವಾತಂತ್ರ್ಯ ಹೋರಾಟಗಾರರ ಚಿತ್ರ ಸಂಗ್ರಹಿಸಿ ಒಂದು ಭಿತ್ತಿ ಪತ್ರವನ್ನು ತಯಾರಿಸಿರಿ.

ನಿಮ್ಮ ಊರಲ್ಲಿ ಸ್ವಾತಂತ್ರ್ಯ ಹೋರಾಟದ ಕುರಿತು ವಿಷಯಗಳನ್ನು ತಿಳಿದಿರುವಂತಹ ವ್ಯಕ್ತಿಗಳು ಯಾರಾದರೂ ಇದ್ದಲ್ಲಿ ಅವರ ಸಂದರ್ಶನವನ್ನು ನಡೆಸಿ ಮಾಹಿತಿ ಸಂಗ್ರಹ ಮಾಡಿರಿ.

ಸ್ವಾತಂತ್ರ್ಯ ಹೋರಾಟಗಳಿಗೆ ಸಂಬಂಧಿಸಿದ ಘಟನೆಗಳು ನಡೆದಂತಹ ಸ್ಥಳಗಳು ನಿಮ್ಮ ಆಸುಪಾಸಿನಲ್ಲಿದ್ದರೆ ಅದನ್ನು ಕಂಡುಹಿಡಿದು ಗುರುತಿಸಿರಿ.

## ಸ್ವಾತಂತ್ರ್ಯದತ್ತ ಭಾರತ

ಅಧ್ಯಾಪಕರಿಂದ ಸಂಗ್ರಹಿಸಿದ ಮಾಹಿತಿಗಳನ್ನು ಒಟ್ಟು ಸೇರಿಸಿ ಸ್ವಾತಂತ್ರ್ಯ ದಿನದ ಸಂಚಿಕೆಯನ್ನು ತಯಾರು ಮಾಡಿದರು. ಈ ಸಂಚಿಕೆಯನ್ನು ಮೇಘ ಟೀಚರ್ ಬಿಡುಗಡೆ ಮಾಡಿದರು. ಸಂಚಿಕೆಯಲ್ಲಿರುವ ವಿಷಯಗಳನ್ನು ಓದಿ ನೋಡಿರಿ.



ಸ್ವಾತಂತ್ರ್ಯಕ್ಕೋಸ್ಕರ ಭಾರತದೆಲ್ಲೆಡೆ ಹಲವಾರು ಹೋರಾಟಗಳು ನಡೆದವು. ಗಾಂಧೀಜಿಯವರಂತಹ ಹಲವಾರು ನಾಯಕರ ಭಾಷಣ, ಮಾತು ಮತ್ತು ಘೋಷಣೆಗಳು ಇಂತಹ ಹೋರಾಟಗಳಿಗೆ ಸ್ಫೂರ್ತಿಯನ್ನು ನೀಡಿದವು.





ಕೆಲವು ಹೋರಾಟಗಳು ಗಲಭೆಗಳಾಗಿ ಬದಲಾದವು. ಹೆಚ್ಚಿನ ಭಾರತೀಯರು ಬ್ರಿಟಿಷರ ವಿರುದ್ಧ ಆಯುಧಗಳನ್ನು ಹಿಡಿದು ಹೋರಾಡಿದರು. ಅವರಲ್ಲಿ ಹೆಚ್ಚಿನ ಜನರೂ ತಮ್ಮ ಪ್ರಾಣವನ್ನು ಕಳೆದುಕೊಳ್ಳಬೇಕಾಯಿತು.

ಈ ಹೋರಾಟಗಳಿಗೆ ನೇತೃತ್ವ ನೀಡಿದ ನಾಯಕರು ಹಲವು ಬಾರಿ ಜೈಲುವಾಸವನ್ನು ಅನುಭವಿಸಿದರು. ಅವರ ಜೊತೆ ಸಾವಿರಾರು ಮಂದಿ ಜನರನ್ನು ಬಂಧಿಸಲಾಯಿತು. ಭಾರತೀಯರ ಮೇಲೆ ಅತಿ ಕ್ರೂರವಾದ ಕಾನೂನುಗಳನ್ನು ಹೇರಲಾಯಿತು.





ಹಲವಾರು ಹೋರಾಟಗಳು ಹಾಗೂ ಚರ್ಚೆಗಳ ಫಲವಾಗಿ ಕೊನೆಗೆ ಭಾರತದ ಆಡಳಿತವನ್ನು ಭಾರತೀಯರಿಗೆ ಬಿಟ್ಟುಕೊಡಲು ಬ್ರಿಟಿಷರು ನಿರ್ಬಂಧಿತರಾದರು.

1947 ಆಗಸ್ಟ್ 15 ರಂದು ಬ್ರಿಟಿಷ್ ಆಡಳಿತದಿಂದ ಭಾರತವು ಸ್ವಾತಂತ್ರ್ಯ ಪಡೆದುದಾಗಿ ಘೋಷಿಸಲಾಯಿತು. ಸ್ವತಂತ್ರ ಭಾರತದ ಮೊದಲ ಪ್ರಧಾನಮಂತ್ರಿಯಾಗಿ ಜವಹರಲಾಲ್ ನೆಹರು ಅವರು ಪ್ರಮಾಣವಚನ ಮಾಡಿ ಅಧಿಕಾರ ವಹಿಸಿಕೊಂಡರು.





*"ಈ ಅರ್ಧ ರಾತ್ರಿಯಲ್ಲಿ ವಿಶ್ವವೇ ನಿದ್ದೆಗೆ ಜಾರುತ್ತಿರುವಾಗ ಭಾರತವು ಸ್ವಾತಂತ್ರ್ಯದ ಕಡೆಗೂ ಜೀವನದ ಕಡೆಗೂ ಎದ್ದೇಳುತ್ತಿದೆ.."*
ಎಂದು ಅವರು ಉತ್ಸಾಹ ಭರಿತರಾಗಿ ಭಾಷಣ ಮಾಡಿದರು.

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದರ ಬಗ್ಗೆ ಇರುವ ಹೇಳಿಕೆಗಳನ್ನು ಓದಿದಿರಲ್ಲವೇ.

ಶಾಲಾ ಗ್ರಂಥಾಲಯದಿಂದ ಹೆಚ್ಚಿನ ವಿಷಯಗಳನ್ನು ಸಂಗ್ರಹಿಸಿರಿ.

ಕೆಳಗೆ ನೀಡಿರುವ ಹೇಳಿಕೆಗಳು ಸರಿಯೋ ತಪ್ಪೋ ಎಂದು ನೋಡಿ (✓ / X) ಗುರುತು ಹಾಕಿರಿ.

- ಇವತ್ತು ನಮಗೆ ಲಭಿಸಿರುವ ಸ್ವಾತಂತ್ರ್ಯ ಹಿಂದೆ ಅನೇಕ ಮಂದಿಯ ಜೀವತ್ಯಾಗದ ಫಲವಾಗಿದೆ. ☐
- ನಮಗೆ ಸ್ವಾತಂತ್ರ್ಯ ಗಳಿಸಿಕೊಡಲು ಹೋರಾಡಿದ ನೇತಾರರನ್ನು ನಾವು ಗೌರವಿಸಬೇಕಾಗಿದೆ. ☐
- ನಮಗೆ ಲಭಿಸಿರುವ ಈ ಸ್ವಾತಂತ್ರ್ಯವನ್ನು ಕಾಪಾಡುವುದು ಹಾಗೂ ಉಳಿಸುವುದು ನಮ್ಮ ಕರ್ತವ್ಯವಾಗಿದೆ. ☐
- ಭಾರತೀಯರಾದ ನಾವು ನಮ್ಮ ರಾಜ್ಯದ ಬಗ್ಗೆ ಹೆಮ್ಮೆಪಡಬೇಕು ಹಾಗೂ ರಾಷ್ಟ್ರ ಪ್ರೇಮವನ್ನು ಬೆಳೆಸಬೇಕು. ☐
- ಎಲ್ಲಾ ವರ್ಷವೂ ಸ್ವಾತಂತ್ರ್ಯ ದಿನಾಚರಣೆಯನ್ನು ಉತ್ತಮವಾದ ರೀತಿಯಲ್ಲಿ ಆಚರಿಸಬೇಕಾಗಿದೆ. ☐



ಸ್ವಾತಂತ್ರ್ಯ ಹೋರಾಟಗಳಿಗೆ ಸಂಬಂಧಪಟ್ಟಂತಹ ಪತ್ರಿಕಾ ತುಣುಕುಗಳನ್ನು ಹಾಗೂ ಚಿತ್ರಗಳನ್ನು ಇಂಟರ್ನೆಟ್ ನಿಂದ ಸಂಗ್ರಹಿಸಿ ಒಂದು ಡಿಜಿಟಲ್ ಆಲ್ಬಮ್ ತಯಾರಿಸಿರಿ.

## ಭಾರತದ ಸಂವಿಧಾನ

ನಿಮ್ಮ ಪಾಠ ಪುಸ್ತಕದ ಮೊದಲ ಹಾಗೂ ಕೊನೆಯ ಪುಟದಲ್ಲಿ ಭಾರತದ ಸಂವಿಧಾನದ ಕೆಲವು ಭಾಗಗಳನ್ನು ಒಳಪಡಿಸಲಾಗಿದೆ. ಅದನ್ನು ಓದಿ ನೋಡಿ. ಈ ಸಂವಿಧಾನದ ರಚನೆಗೆ ಮುಖ್ಯ ಪಾತ್ರ ವಹಿಸಿದ ವ್ಯಕ್ತಿ ಯಾರೆಂದು ಗೊತ್ತೇ?

ಸ್ವತಂತ್ರ ಭಾರತದ ಮೊದಲ ಕಾನೂನುಮಂತ್ರಿಗಳಾಗಿದ್ದ **ಡಾಕ್ಟರ್ ಭೀಮ್ ರಾವ್ ರಾಂಜಿ ಅಂಬೇಡ್ಕರ್** ಅವರ ನೇತೃತ್ವದಲ್ಲಿ ಸ್ವತಂತ್ರ ಭಾರತಕ್ಕೆ ಬೇಕಾಗಿ ಒಂದು ಹೊಸ ನಿಯಮ ಸಂಹಿತೆಯನ್ನು ತಯಾರಿಸಲಾಯಿತು. ಇದು **'ಭಾರತದ ಸಂವಿಧಾನ'** ಎಂದು ತಿಳಿಯಲ್ಪಟ್ಟಿತು.

**1950 ಜನವರಿ 26** ರಂದು ಭಾರತದ ಸಂವಿಧಾನವು ಜಾರಿಗೆ ಬಂತು.





ಭಾರತದ ಪೌರನ ಹಕ್ಕುಗಳು, ಕರ್ತವ್ಯಗಳು, ಸರಕಾರ ಹಾಗೂ ಚುನಾವಣೆ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಇದರಲ್ಲಿ ಒಳಪಡಿಸಲಾಗಿದೆ.

ಕೆಳಗೆ ನೀಡಲಾದ ಪ್ರಶ್ನೆಗಳಿಗೆ ತರಗತಿ ಗ್ರಂಥಾಲಯದ ಸಹಾಯದೊಂದಿಗೆ ಉತ್ತರವನ್ನು ಕಂಡುಹಿಡಿದು ಪೂರ್ತಿಗೊಳಿಸಿರಿ.

- ಭಾರತದ ಸಂವಿಧಾನವು ಜಾರಿಗೆ ಬಂದ ದಿನವನ್ನು ನಾವು ಯಾವ ಹೆಸರಿನಲ್ಲಿ ಆಚರಿಸುತ್ತೇವೆ?

  ------------------------------------

- ಯಾರನ್ನು ಭಾರತದ ಸಂವಿಧಾನ ಶಿಲ್ಪಿ ಎಂದು ಕರೆಯುವರು?

  ------------------------------------

- ಅತಿ ದೊಡ್ಡ ಲಿಖಿತ ಸಂವಿಧಾನವಿರುವ ರಾಷ್ಟ್ರ ಯಾವುದು?

  ------------------------------------

## ಭಾರತ ಇಂದು

ಮಕ್ಕಳು ಗ್ರಂಥಾಲಯದಿಂದ ಸಂಗ್ರಹಿಸಿದ ಮಾಹಿತಿಗಳನ್ನು ತಮ್ಮ ಗೆಳೆಯರ ಜೊತೆ ಹಂಚಿಕೊಂಡರು. ಅವರ ಜೊತೆ ಚರ್ಚೆಯಲ್ಲಿ ಮೇಘ ಟೀಚರ್ ಕೂಡ ಒಟ್ಟು ಸೇರಿಕೊಂಡರು.

“ಟೀಚರ್! ದೇಶೀಯ ರಾಜ್ಯಗಳನ್ನು ಒಟ್ಟು ಸೇರಿಸಿ ಭಾರತವೆಂಬ ರಾಷ್ಟ್ರಕ್ಕೆ ರೂಪು ನೀಡಲಾಯಿತಲ್ಲವೇ?.” ಜೋಹಾನನು ತನ್ನ ಸಂಶಯವನ್ನು ಆಧ್ಯಾಪಿಕೆಯ ಮುಂದಿಟ್ಟನು.

“ಹೌದು, ಹೀಗೆ ಒಟ್ಟು ಸೇರಿದ ಪ್ರದೇಶಗಳನ್ನು ಆಡಳಿತದ ಸೌಕರ್ಯಕ್ಕೋಸ್ಕರ ಭಾಷೆಯ ಆಧಾರದಲ್ಲಿ ವಿಭಾಗಿಸಲಾಯಿತು. ಹೀಗೆ ರೂಪುಗೊಂಡ ಪ್ರದೇಶಗಳು ಮುಂದೆ **'ರಾಜ್ಯಗಳು'** ಎಂದು ತಿಳಿಯಲ್ಪಟ್ಟವು.” ಟೀಚರ್ ವಿವರಿಸಿದರು.

## ರಾಜ್ಯಗಳು

ಭಾರತದ ಭೂಪಟವನ್ನು ಟೀಚರ್ ಮಕ್ಕಳಿಗೆ ಪರಿಚಯಿಸಿಕೊಟ್ಟರು.

“ಈಗ ಭಾರತದಲ್ಲಿ ಒಟ್ಟು **28** ರಾಜ್ಯಗಳಿವೆ. ಪ್ರತಿ ರಾಜ್ಯದ ಆಡಳಿತ ಕೇಂದ್ರವನ್ನು ಅದರ **'ರಾಜಧಾನಿ'** ಎಂದು ಕರೆಯುವರು.”

ಭಾರತದ ರಾಜ್ಯಗಳು ಮತ್ತು ಅವುಗಳ ರಾಜಧಾನಿಗಳನ್ನು ಸೂಚಿಸುವ ಕೆಳಗಿನ ಪಟ್ಟಿ ಮತ್ತು ಭೂಪಟವನ್ನು ನಿರೀಕ್ಷಿಸಿರಿ.








ರಾಜ್ಯಗಳ ಪಟ್ಟಿಯನ್ನು ತಯಾರಿಸಿರಿ.

| | | | | | | | |
|---|---|---|---|---|---|---|---|
| 1 | ಕೇರಳ | 8 | | 15 | | 22 | |
| 2 | ತಮಿಳುನಾಡು | 9 | | 16 | | 23 | |
| 3 | ಕರ್ನಾಟಕ | 10 | | 17 | | 24 | |
| 4 | ಆಂಧ್ರಪ್ರದೇಶ | 11 | | 18 | | 25 | |
| 5 | ಗೋವಾ | 12 | | 19 | | 26 | |
| 6 | ತೆಲಂಗಾಣ | 13 | | 20 | | 27 | |
| 7 | ಮಹಾರಾಷ್ಟ್ರ | 14 | | 21 | | 28 | |

ಭಾರತದ ರಾಜ್ಯ ಹಾಗೂ ಅವುಗಳ ರಾಜಧಾನಿಯನ್ನು ಒಳಗೊಂಡ ಪಟ್ಟಿಯನ್ನು **ನನ್ನ ಪರಿಸರ ಅಧ್ಯಯನ ಪುಸ್ತಕ**ದಲ್ಲೂ ಬರೆಯಿರಿ.

## ಕೇಂದ್ರಾಡಳಿತ ಪ್ರದೇಶಗಳು

"ಭಾರತದಲ್ಲಿ ರಾಜ್ಯಗಳ ಪಟ್ಟಿಗೆ ಸೇರದಂತಹ ಕೆಲವು ಸ್ಥಳಗಳು ಕೂಡ ಇವೆ. ಈ ಪ್ರದೇಶಗಳು ಕೇಂದ್ರ ಸರಕಾರದ ನಿಯಂತ್ರಣದಲ್ಲಿರುವುದು. ಇಂತಹ ಪ್ರದೇಶಗಳ ಬಗ್ಗೆ ನೀವು ಕೇಳಿದ್ದೀರಾ?" ಮೇಘ ಟೀಚರ್ ಮಕ್ಕಳಲ್ಲಿ ಕೇಳಿದರು.

"ನಾನು ಕೇಳಿದ್ದೇನೆ ಟೀಚರ್. ಅಂತಹ ಸ್ಥಳಗಳಿಗೆ **ಕೇಂದ್ರಾಡಳಿತ ಪ್ರದೇಶ** ಎಂದಲ್ಲವೇ ಹೆಸರು" ಮಿಕ ತಟ್ಟನೆ ಎದ್ದು ಉತ್ತರ ಹೇಳಿದಳು.

"ಹೌದು. ಇದೀಗ ಭಾರತದಲ್ಲಿ **8** ಕೇಂದ್ರಾಡಳಿತ ಪ್ರದೇಶಗಳಿವೆ" ಟೀಚರ್ ಹೇಳಿದರು.

ಈಗ ಭಾರತದಲ್ಲಿರುವ ಕೇಂದ್ರಾಡಳಿತ ಪ್ರದೇಶಗಳು ಯಾವುವು ಎಂದು ನೀವು ಭೂಪಟವನ್ನು ನೋಡಿ ಕಂಡುಹಿಡಿದು ಬರೆಯಿರಿ.

ಭಾರತದ ಭೂಪಟವನ್ನು ನಿರೀಕ್ಷಣೆ ಮಾಡಿ ಈ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯಿರಿ.

- ಭಾರತದ ನೆರೆ ರಾಷ್ಟ್ರಗಳು ಯಾವುವು?

  ------------------------------------------------------------

- ಅರಬಿ ಸಮುದ್ರದ ತೀರದಲ್ಲಿರುವ ರಾಜ್ಯಗಳು ಯಾವುವು?

  ------------------------------------------------------------

- ಬಂಗಾಳಕೊಲ್ಲಿಯ ತೀರದಲ್ಲಿರುವ ರಾಜ್ಯಗಳು ಯಾವುವು?

  ------------------------------------------------------------

- ಭಾರತದ ಅತಿ ಸಣ್ಣ ರಾಜ್ಯ ಯಾವುದು?

  ------------------------------------------------------------

- ಅತಿ ಹೆಚ್ಚು ರಾಜ್ಯಗಳೊಂದಿಗೆ ಗಡಿಯನ್ನು ಹಂಚಿಕೊಂಡಿರುವ ರಾಜ್ಯ ಯಾವುದು?

  ------------------------------------------------------------

ಕೆಳಗೆ ನೀಡಿರುವ ಪದಬಂಧವನ್ನು ಪೂರ್ತಿಗೊಳಿಸಿರಿ.

| | | | | | | | | |
|---|---|---|---|---|---|---|---|---|
| 1 | | | | | | | | 9 |
| 2 | | 7 | | 8 | | | | |
| | | | | 3 | | | | |
| | | | | | 6 | | | |
| | 10 | | | 4 | | | | |
| | | | | | 5 | | | |







### ಎಡದಿಂದ ಬಲಕ್ಕೆ

1. ಇದು ಕೇರಳದ ನೆರೆ ರಾಜ್ಯವಾಗಿದೆ. ಇದರ ರಾಜಧಾನಿ ಬೆಂಗಳೂರು ಆಗಿದೆ.
2. ಅರಬಿ ಸಮುದ್ರದ ತೀರದಲ್ಲಿರುವ ರಾಜ್ಯವಾಗಿದೆ. ಗುಜರಾತಿನ ನೆರೆರಾಜ್ಯವಾಗಿದೆ.
3. ನೆರೆದೇಶವಾದ ಮ್ಯಾನ್ಮಾರಿನ ಜೊತೆಗೆ ಗಡಿಯನ್ನು ಹಂಚಿಕೊಳ್ಳುತ್ತದೆ. ತ್ರಿಪುರದ ಸಮೀಪವಿರುವ ರಾಜ್ಯವಾಗಿದೆ.
4. ಈ ರಾಜ್ಯದ ರಾಜಧಾನಿ ಕೊಹಿಮ ಆಗಿದೆ.
5. ಬಾಂಗ್ಲಾದೇಶದ ಜೊತೆಗೆ ಗಡಿ ಹಂಚುವುದು. ಈ ರಾಜ್ಯವು ಅಸ್ಸಾಮಿನ ನೆರೆ ರಾಜ್ಯವಾಗಿದೆ.
6. ರಾಜಸ್ಥಾನ್, ಪಂಜಾಬ್, ಉತ್ತರ ಪ್ರದೇಶ ಎಂಬಿ ರಾಜ್ಯಗಳ ಜೊತೆಗೆ ಗಡಿ ಹಂಚುವುದು. ಈ ರಾಜ್ಯದ ರಾಜಧಾನಿಯು ದೆಹಲಿಗೆ ಹತ್ತಿರದಲ್ಲಿದೆ.

### ಕೆಳಕ್ಕೆ

2. ಗಾತ್ರದಲ್ಲಿ ಎರಡನೇ ಸ್ಥಾನವನ್ನು ಅಲಂಕರಿಸುವ ಈ ರಾಜ್ಯವು ಭಾರತದ ಮಧ್ಯ ಭಾಗದಲ್ಲಿದೆ.
7. ಭಾರತದ ಅತಿ ದೊಡ್ಡ ರಾಜ್ಯ.
8. ಕೇರಳದ ನೆರೆ ರಾಜ್ಯವಾಗಿದೆ. ಈ ರಾಜ್ಯದ ರಾಜಧಾನಿಯು ಚೆನ್ನೈ ಆಗಿದೆ.
9. ಹೈದರಾಬಾದ್ ನಗರವು ಈ ರಾಜ್ಯದಲ್ಲಿ ಇದೆ.

### ಮೇಲಕ್ಕೆ

10. ನೇಪಾಳದೊಂದಿಗೆ ಗಡಿಯನ್ನು ಹಂಚಿಕೊಳ್ಳುತ್ತದೆ. ಪಾಟ್ನಾ ರಾಜಧಾನಿಯಾಗಿದೆ.

ಇನ್ನೂ ಹೆಚ್ಚಿನ ಪ್ರಶ್ನೆಗಳನ್ನು ತಯಾರಿಸಿ ತರಗತಿಯಲ್ಲಿ ಪ್ರಶ್ನೋತ್ತರ ಸ್ಪರ್ಧೆಯನ್ನು ನಡೆಸಿರಿ.

ಪಡಿಯಚ್ಚು ತೆಗೆಯುವ ಕಾಗದ (ಟ್ರೇಸ್ ಪೇಪರ್) ವನ್ನು ಬಳಸಿ ಭಾರತದ ಭೂಪಟವನ್ನು ರಚಿಸಿ ಅದರಲ್ಲಿ ರಾಜ್ಯಗಳನ್ನು ಗುರುತಿಸಿರಿ. ಬಳಿಕ ದಪ್ಪ ಕಾಗದಗಳಿಗೆ ಇದನ್ನು ಅಂಟಿಸಿ ಪ್ರತಿಯೊಂದು ರಾಜ್ಯವನ್ನು ಕತ್ತರಿಸಿ ತೆಗೆದು ಜಿಪ್ಸೋ ತಯಾರಿಸಿ ತರಗತಿಯಲ್ಲಿ ಆಟವಾಡಲು ಬಳಸಿರಿ.

## ವೈವಿಧ್ಯದಿಂದ ಕೂಡಿದ ಭಾರತ

ಭಾರತ ದೇಶದ ವಿವಿಧ ರಾಜ್ಯಗಳಲ್ಲಿ ವಾಸಿಸುವ ಜನರು ಮಾತನಾಡುವ ಭಾಷೆ ಒಂದೇ ಆಗಿದೆಯೇ?

ಭಾರತೀಯರು ಎಲ್ಲರೂ ಧರಿಸುವ ವಸ್ತ್ರ ಒಂದೇ ರೀತಿಯದ್ದು ಆಗಿದೆಯೇ?

ಭಾರತದ ಎಲ್ಲಾ ಹಬ್ಬಗಳು ಭಾರತದೆಲ್ಲೆಡೆ ಆಚರಿಸಲ್ಪಡುತ್ತದೆಯೇ?

ನಿಮ್ಮ ಅಭಿಪ್ರಾಯವನ್ನು ತಿಳಿಸಿರಿ.



# ರಾಷ್ಟ್ರ ಒಂದು, ಭಾಷೆ ಹಲವು

ಕೇರಳ ಜನತೆಯ ಮಾತೃಭಾಷೆಯು ಮಲಯಾಳವಲ್ಲವೇ? ನಮ್ಮ ನೆರೆ ರಾಜ್ಯವಾದ ತಮಿಳುನಾಡಿನ ಮಾತೃಭಾಷೆ ಯಾವುದು? ಅದೇ ರೀತಿ ಕರ್ನಾಟಕದ ಮಾತೃಭಾಷೆಯೋ?




ಭಾರತದಲ್ಲಿರುವ ಇತರ ಭಾಷೆಗಳು ಯಾವುವು?

ಕಂಡುಹಿಡಿದು ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ರಾಜ್ಯ | ಭಾಷೆ |
|---|---|
| ಆಂಧ್ರಪ್ರದೇಶ | ತೆಲುಗು |
| ತೆಲಂಗಾಣ | |
| ಮಹಾರಾಷ್ಟ್ರ | |
| ಒಡಿಶಾ | |
| | |

ಭಾರತದ ನೋಟಿನಲ್ಲಿ ಎಷ್ಟು ಭಾಷೆಗಳಲ್ಲಿ ಹಣದ ಮೌಲ್ಯವನ್ನು ದಾಖಲಿಸಿದ್ದಾರೆ ಎಂಬುದನ್ನು ನೀವು ಗಮನಿಸಿದ್ದೀರಾ?




ಅವು ಯಾವುವು?

ಕಂಡುಹಿಡಿದು **ನನ್ನ ಪರಿಸರ ಅಧ್ಯಯನ ಪುಸ್ತಕ**ದಲ್ಲಿ ದಾಖಲಿಸಿರಿ.



# ರಾಷ್ಟ್ರ ಒಂದು, ವೇಷ ಹಲವು

ಚಿತ್ರವನ್ನು ನಿರೀಕ್ಷಿಸಿರಿ.



ಈ ಚಿತ್ರವನ್ನು ಗಮನಿಸಿದಾಗ ಭಾರತದ ಜನರು ತಮ್ಮ ವಸ್ತ್ರವಿಧಾನಗಳಲ್ಲಿ ಎಷ್ಟೊಂದು ವ್ಯತ್ಯಾಸ ಹೊಂದಿದ್ದಾರೆಂದು ತಿಳಿಯಿತಲ್ಲವೇ.

ಭಾರತದ ವಿವಿಧ ಪ್ರದೇಶಗಳ ಜನರು ಧರಿಸುವ ಬಟ್ಟೆಬರೆಗಳಲ್ಲಿರುವ ವೈವಿಧ್ಯಗಳನ್ನು ತೋರಿಸುವಂತಹ ಒಂದು ಡಿಜಿಟಲ್ ಪ್ರದರ್ಶನವನ್ನು ತರಗತಿಯಲ್ಲಿ ಆಯೋಜಿಸಿರಿ.

ಇನ್ನು ನಮ್ಮ ಭಾರತ ದೇಶದಲ್ಲಿ ಆಚರಿಸಲ್ಪಡುವ ಕೆಲವು ಹಬ್ಬಗಳ ಕುರಿತು ತಿಳಿಯೋಣ.



ಭಾರತದಲ್ಲಿ ಆಚರಿಸಲ್ಪಡುವ ಪ್ರಧಾನವಾದ ಹಬ್ಬಗಳು ಯಾವುವು?

- ದೀಪಾವಳಿ
- ಈದ್-ಉಲ್-ಫಿತರ್
- ಕ್ರಿಸ್ಮಸ್
- 

ಹೆಚ್ಚಿನ ಹಬ್ಬಗಳ ಚಿತ್ರಗಳನ್ನು ಸೇರಿಸಿ ಒಂದು ಡಿಜಿಟಲ್ ಆಲ್ಬಮ್ ತಯಾರಿಸಿರಿ.

## ಹಲವು ವಿಧದ ಕಲೆಗಳು


ಕೂಚಿಪುಡಿ


ಕಥಕ್


ಮೋಹಿನಿಯಾಟ್ಟಂ


ಮಣಿಪುರಿ


ಭರತನಾಟ್ಯ

ಭಾರತದೆಲ್ಲೆಡೆ ಪ್ರಚಾರದಲ್ಲಿರುವಂತಹ ಕಲೆಗಳು ಒಂದೇ ಆಗಿದೆಯೇ?

ಚಿತ್ರವನ್ನು ನಿರೀಕ್ಷಣೆ ಮಾಡಿರಿ.

ಇದರಲ್ಲಿ ನಿಮಗೆ ಯಾವೆಲ್ಲಾ ನೃತ್ಯ ರೂಪಗಳ ಪರಿಚಯವಿದೆ?

ಉಳಿದವುಗಳು ಯಾವ ರಾಜ್ಯಗಳ ಕಲಾ ರೂಪಗಳಾಗಿವೆ ಎಂದು ಕಂಡುಹಿಡಿದು ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಕಲಾರೂಪ | ರಾಜ್ಯ |
|---|---|
| ಮೋಹಿನಿಯಾಟ್ಟಂ | ಕೇರಳ |
| ಭರತನಾಟ್ಯ | |
| ಕೂಚಿಪುಡಿ | |
| ಕಥಕ್ | |
| ಮಣಿಪುರಿ | |

ಭಾರತೀಯರಾದ ನಾವು ವೇಷ ಭೂಷಣ, ಹಬ್ಬ ಆಚರಣೆ ಮತ್ತು ಕಲಾ ಪ್ರಕಾರಗಳಲ್ಲಿ ಎಷ್ಟೆಲ್ಲಾ ವೈವಿಧ್ಯವನ್ನು ಹೊಂದಿದ್ದೇವೆ ಎಂದು ತಿಳಿಯಿತಲ್ಲವೇ? ಈ ರೀತಿಯ ವೈವಿಧ್ಯಗಳಿದ್ದರೂ ಭಾರತೀಯರಾದ ನಮ್ಮನ್ನು ಒಟ್ಟುಗೂಡಿಸುವ ಕೆಲವು ಸಂಕೇತಗಳನ್ನು ಪರಿಚಯಿಸೋಣ.

## ಒಗ್ಗಟಿನ ಸಂಕೇತಗಳು

ಭಾರತದ ರಾಷ್ಟ್ರಧ್ವಜದ ಬಗ್ಗೆ ನೀವು ಕಲಿತಿದ್ದೀರಲ್ಲವೇ?

ಇತರ ರಾಷ್ಟ್ರೀಯ ಸಂಕೇತಗಳು ಯಾವುವು?

- ರಾಷ್ಟ್ರಗೀತೆ
- ರಾಷ್ಟ್ರೀಯ ಗಾನ
-
- ರಾಷ್ಟ್ರೀಯ ಲಾಂಛನ
-
-



## ರಾಷ್ಟ್ರಗೀತೆ



ದಿನನಿತ್ಯ ನಾವು ಶಾಲೆಯಲ್ಲಿ ರಾಷ್ಟ್ರಗೀತೆಯನ್ನು ಹಾಡುತ್ತೇವೆ.

**ರವೀಂದ್ರನಾಥ ಠಾಗೋರ್** ಅವರು ರಚಿಸಿದ **'ಜನಗಣಮನ...'** ನಮ್ಮ ರಾಷ್ಟ್ರಗೀತೆ ಆಗಿದೆ.

ಕೆಳಗೆ ನೀಡಿರುವ ಪ್ರಶ್ನೆಗಳಿಗೆ ತರಗತಿ ಗ್ರಂಥಾಲಯದ ಸಹಾಯದಿಂದ ಉತ್ತರವನ್ನು ಕಂಡುಹಿಡಿಯಿರಿ.

- ರಾಷ್ಟ್ರ ಗೀತೆಯನ್ನು ಯಾವ ಭಾಷೆಯಲ್ಲಿ ಬರೆಯಲಾಗಿದೆ?
- ರಾಷ್ಟ್ರಗೀತೆಯನ್ನು ಹೇಳುವಾಗ ನಿಲ್ಲಬೇಕಾದ ರೀತಿ ಯಾವುದು?
- ರಾಷ್ಟ್ರಗೀತೆಯನ್ನು ಹಾಡಲು ತೆಗೆದುಕೊಳ್ಳಬೇಕಾದ ಸಮಯ ಎಷ್ಟು?

## ರಾಷ್ಟ್ರೀಯ ಲಾಂಛನ

ಚಿತ್ರದಲ್ಲಿರುವ ರಾಷ್ಟ್ರೀಯ ಲಾಂಛನವನ್ನು ಗಮನಿಸಿ ನೋಡಿರಿ.

ಈ ಲಾಂಛನವನ್ನು ನೀವು ಎಲ್ಲೆಲ್ಲಾ ನೋಡಿದ್ದೀರಿ?



सत्यमेव जयते

ಭಾರತದ ರಾಷ್ಟ್ರೀಯ ಲಾಂಛನವನ್ನು ಉತ್ತರ ಪ್ರದೇಶದ ಸಾರನಾಥನಲ್ಲಿ ಅಶೋಕ ಚಕ್ರವರ್ತಿಯು ಸ್ಥಾಪಿಸಿದ ಸ್ತೂಪದಿಂದ ಸ್ವೀಕರಿಸಲಾಗಿದೆ. ಈ ರಾಷ್ಟ್ರೀಯ ಲಾಂಛನದಲ್ಲಿ ಮುಖ್ಯವಾಗಿ ನಾಲ್ಕು ದಿಗಳಿಗೆ ಮುಖ ಮಾಡಿ ನಿಂತಿರುವ ಸಿಂಹಗಳನ್ನು ಕಾಣಬಹುದು. ಅದರ ಕೆಳಭಾಗದ ಮಧ್ಯದಲ್ಲಿರುವ ಧರ್ಮ ಚಕ್ರವೇ **ಅಶೋಕ ಚಕ್ರ.**

ಅಶೋಕ ಚಕ್ರದಲ್ಲಿ **24** ಅರಗಳಿವೆ.

ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯಿರಿ.

- ರಾಷ್ಟ್ರೀಯ ಲಾಂಛನದ ಅಡಿಭಾಗದಲ್ಲಿ ಬರೆದಿರುವ ವಾಕ್ಯವೇನು? ಅದರ ಅರ್ಥವೇನು?
- ಲಾಂಛನದಲ್ಲಿ ಕಂಡುಬರುವ ಇತರ ಮೃಗಗಳು ಯಾವುವು?



## ರಾಷ್ಟ್ರೀಯ ಗಾನ



ನಮ್ಮ ರಾಷ್ಟ್ರೀಯ ಗಾನವು **ಬಂಕಿಮ್ ಚಂದ್ರ ಚಟರ್ಜಿ** ಅವರು ಬರೆದ **'ವಂದೇ ಮಾತರಂ...'** ಆಗಿದೆ. ಇದು ಬಂಗಾಳಿ ಭಾಷೆಯ ಜೊತೆಗೆ ಸಂಸ್ಕೃತ ಪದವನ್ನು ಸೇರಿಸಿ ಬರೆಯಲ್ಪಟ್ಟಿದೆ.

ಅಸೆಂಬ್ಲಿಯಲ್ಲಿ ನಿಮ್ಮ ಗೆಳೆಯರ ಜೊತೆಗೂಡಿ ರಾಷ್ಟ್ರೀಯ ಗಾನವನ್ನು ಹಾಡಿರಿ.

ಇತರ ರಾಷ್ಟ್ರೀಯ ಸಂಕೇತಗಳನ್ನು ಕಂಡುಹಿಡಿಯಿರಿ.

ಅವುಗಳ ಚಿತ್ರ ಮತ್ತು ಮಾಹಿತಿಗಳನ್ನು ಸಂಗ್ರಹಿಸಿ ತರಗತಿಯ **ಪರಿಸರ ಮೂಲೆ**ಯಲ್ಲಿ ಪ್ರದರ್ಶಿಸಿರಿ.

**ರಾಷ್ಟ್ರದ ಮೇಲೆ ಎಷ್ಟು ಪ್ರೀತಿ ಮತ್ತು ಗೌರವವನ್ನು ನಾವು ತೋರಿಸುತ್ತೇವೆಯೋ ಅಷ್ಟೇ ಪ್ರೀತಿ ಮತ್ತು ಗೌರವವನ್ನು ರಾಷ್ಟ್ರೀಯ ಸಂಕೇತಗಳ ಮೇಲೂ ತೋರಿಸಬೇಕು. ರಾಷ್ಟ್ರೀಯ ಸಂಕೇತಗಳನ್ನು ಗೌರವಿಸದಿರುವುದು ಶಿಕ್ಷಾರ್ಹವಾಗಿದೆ.**

## ಭಾರತವು ನಮ್ಮ ಹೆಮ್ಮೆ

ಬ್ರಿಟಿಷರ ಗುಲಾಮಗಿರಿಯಿಂದ ಸ್ವತಂತ್ರ ಭಾರತದವರೆಗೆ ತಲುಪಲು ಭಾರತೀಯರು ನಡೆಸಿದ ಹೋರಾಟಗಳನ್ನು ನಾವು ತಿಳಿದುಕೊಂಡೆವು.

ಸಹಸ್ರಾರು ಮಂದಿ ತಮ್ಮ ಜೀವತ್ಯಾಗ ಮಾಡಿ ಗಳಿಸಿದ ಸ್ವಾತಂತ್ರ್ಯ!

ಭಾರತೀಯರು ಹಲವಾರು ಪ್ರದೇಶಗಳಲ್ಲಿ ಭಾಷೆಯಲ್ಲೂ ವೇಷದಲ್ಲೂ ಜೀವನ ಕ್ರಮದಲ್ಲೂ ವೈವಿಧ್ಯವನ್ನು ಪಾಲಿಸಿಕೊಂಡು ಜೀವಿಸುತ್ತಿದ್ದಾರೆ.

ಇಷ್ಟೆಲ್ಲಾ ವೈವಿಧ್ಯ ಇದ್ದರೂ ಭಾರತೀಯರು ಎಂಬ ನಿಟ್ಟಿನಲ್ಲಿ ನಾವೆಲ್ಲ ಒಂದೇ ಭಾವನೆಯಿಂದ ಜೀವನ ನಡೆಸುತ್ತಾ ಇದ್ದೇವೆ. ಈ ಭಾವನೆಯೇ **ವಿವಿಧತೆಯಲ್ಲಿ ಏಕತೆ! (Unity in Diversity).** ಭಾರತವು ನಮ್ಮ ಹೆಮ್ಮೆ....

ಒಕ್ಕೊರಳಿನಿಂದ ನಾವೆಲ್ಲರೂ ಒಗ್ಗಟ್ಟಾಗಿ ಹೇಳೋಣ....

*ನನ್ನ ದೇಶ ಭಾರತ... ನನ್ನ ಸ್ವಂತ ಭಾರತ...*

*ಭಾರತವು ನನ್ನ ಪ್ರಾಣಕ್ಕಿಂತಲೂ ಮಿಗಿಲಾದ ದೇಶ!!!*



## ಮೌಲ್ಯಮಾಪನ ಮಾಡೋಣ

1. ಹೊಂದಿಸಿ ಬರೆಯಿರಿ

| | | |
|---|---|---|
| ಭಾರತದ ಸ್ವಾತಂತ್ರ್ಯ ದಿನ | - | 1948 ಜನವರಿ 30 |
| ಭಾರತದ ಸಂವಿಧಾನ ಜಾರಿಗೆ ಬಂದ ದಿನ | - | 1942 ಆಗಸ್ಟ್ 8 |
| ಕ್ವಿಟ್ ಇಂಡಿಯಾ ದಿನ | - | 1950 ಜನವರಿ 26 |
| ಗಾಂಧೀಜಿಯವರ ಚರಮ ದಿನ | - | 1949 ನವಂಬರ್ 26 |
| ಭಾರತದ ಸಂವಿಧಾನ ದಿನ | - | 1947 ಆಗಸ್ಟ್ 15 |

2. ಸರಿಯೋ ತಪ್ಪೋ ಎಂದು ಗುರುತಿಸಿರಿ (✓/ X).

- ಗೋವಾ ಮತ್ತು ಕೇರಳ ಪರಸ್ಪರ ಗಡಿಯನ್ನು ಹಂಚಿಕೊಂಡಿವೆ. ☐
- ಅರಬಿ ಸಮುದ್ರ ಹಾಗೂ ಬಂಗಾಳಕೊಲ್ಲಿ ತಮ್ಮ ತೀರವನ್ನು ಭಾರತದ ಜೊತೆಗೆ ಹಂಚಿಕೊಂಡಿವೆ. ☐
- ಭಾರತದಲ್ಲಿ ಅತಿ ಹೆಚ್ಚು ಜನರು ಮಾತನಾಡುವ ಭಾಷೆಯು ಹಿಂದಿ ಆಗಿದೆ. ☐
- ಭಾರತಕ್ಕೆ ಐದು ನೆರೆ ರಾಷ್ಟ್ರಗಳಿವೆ. ☐

## ಮುಂದುವರಿದ ಚಟುವಟಿಕೆಗಳು

1. ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಪಟ್ಟ ಚಿತ್ರ ಮತ್ತು ವಾರ್ತೆಗಳನ್ನು ಸಂಗ್ರಹಿಸಿ ಶಾಲೆಯಲ್ಲಿ ಒಂದು ಪ್ರದರ್ಶನವನ್ನು ಆಯೋಜಿಸಿರಿ.
2. ಭಾರತದ ವಿವಿಧ ರಾಜ್ಯಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿ ಡಿಜಿಟಲ್ ಆಲ್ಬಮ್ ತಯಾರಿಸಿರಿ.



# ರೆಕ್ಕೆಗಳಿರುವ ಗೆಳೆಯರು 3

ಒಂದು ಹಕ್ಕಿಯ ಹಾಡನ್ನು ಕೇಳಿಸಿ ಟೀಚರ್ ಅಂದಿನ ತರಗತಿಯನ್ನು ಆರಂಭಿಸಿದರು.

'ಕುಟ್ರು... ಕುಟ್ರು... ಕುಟ್ರು...'

"ಈ ಹಾಡನ್ನು ನೀವು ಆಲಿಸಿರುವಿರಾ?" ಟೀಚರ್ ಕೇಳಿದರು.



"ಈ ಹಾಡನ್ನು ಹಾಡುವ ಹಕ್ಕಿ ಯಾವುದು? ಯಾರಾದರೂ ಕಂಡಿದ್ದೀರಾ?"

ತರಗತಿ ನಿಶ್ಯಬ್ದವಾಯಿತು.

"ಕುಟ್ರು ಹಕ್ಕಿ ಎಂಬುದು ಅದರ ಹೆಸರು." ಅಯಾನ್ ಹೇಳಿದನು.

ಈ ಹಾಡುಗಾರ ಹಕ್ಕಿಯ ಬಣ್ಣ ಯಾವುದು?

"ಅದರ ಬಣ್ಣ ಹಸಿರು ಆಗಿದೆ ಟೀಚರ್." ಸೈರಾ ಉತ್ತರಿಸಿದಳು.

"ಈ ಹಕ್ಕಿಯನ್ನು 'ಸಣ್ಣ ಕುಟ್ರು ಹಕ್ಕಿ' ಎಂದೂ ಕರೆಯುವರು.

ಹಾಗೆ ಕರೆಯಲು ಕಾರಣವೇನಾಗಿರಬಹುದು?" ಟೀಚರ್ ಮುಂದುವರಿಸಿದರು.



ಹಕ್ಕಿಗಳು ಹಲವು ವಿಧದಲ್ಲಿವೆ.

ಯಾವೆಲ್ಲ ಹಕ್ಕಿಗಳು ನಿಮ್ಮ ಪ್ರದೇಶದಲ್ಲಿವೆ?

ಎಷ್ಟು ಹಕ್ಕಿಗಳ ಹೆಸರು ನಿಮಗೆ ತಿಳಿದಿದೆ? **ನನ್ನ ಪರಿಸರ ಅಧ್ಯಯನ ಪುಸ್ತಕ**ದಲ್ಲಿ ಬರೆಯಿರಿ.

## ಬಣ್ಣ ಹಚ್ಚಿ ಅಂದಗೊಳಿಸಿರಿ.

ಹಕ್ಕಿಗಳನ್ನು ಗುರುತಿಸಿ ಹೆಸರು ಬರೆಯಿರಿ. ಬಣ್ಣ ಹಚ್ಚಿ ಅಂದಗೊಳಿಸಿರಿ.

| | | | |
|---|---|---|---|
|  |  |  |  |
| | | | |

ಚಿತ್ರದಲ್ಲಿರುವ ಹಕ್ಕಿಗಳು ಯಾವೆಲ್ಲ ರೀತಿಯಲ್ಲಿ ವ್ಯತ್ಯಾಸವನ್ನು ಹೊಂದಿವೆ?

- ಗರಿಗಳ ಬಣ್ಣದಲ್ಲಿ
- ಶರೀರದ ಆಕೃತಿ
- 
- 

## ವರ್ಗೀಕರಿಸುವ

ನಮ್ಮ ಪ್ರದೇಶದಲ್ಲಿರುವ ಹಕ್ಕಿಗಳ ಗರಿಗಳೆಲ್ಲವೂ ಒಂದೇ ಬಣ್ಣದಲ್ಲಿ ಇರುವವುಗಳೇ?

ಬೇರೆ ಬೇರೆ ಬಣ್ಣದ ಗರಿಗಳಿರುವ ಹಕ್ಕಿಗಳನ್ನು ನೀವು ನೋಡಿರುವಿರಾ?

ಅವುಗಳು ಯಾವುವು? ಪಟ್ಟಿ ಮಾಡಿರಿ.

ಶರೀರದಲ್ಲಿ ಒಂದೇ ಬಣ್ಣದ ಗರಿಗಳಿರುವವುಗಳು



ಕಾಗೆ ..................................................

..................................................

..................................................

ಶರೀರದಲ್ಲಿ ಬೇರೆ ಬೇರೆ ಬಣ್ಣಗಳಲ್ಲಿರುವ ಗರಿಗಳಿರುವವುಗಳು



ನವಿಲು ..................................................

..................................................

..................................................

ಹಕ್ಕಿಗಳಲ್ಲಿ ಕಂಡುಬರುವ ಸಾಮಾನ್ಯವಾದ ವಿಶೇಷತೆಗಳು ಯಾವುವು?

ಪರಿಸರವನ್ನು ನಿರೀಕ್ಷಿಸಿ, ಬೇರೆ ಬೇರೆ ಹಕ್ಕಿಗಳ ವಿಶೇಷತೆಗಳನ್ನು ಗುರುತಿಸಿರಿ.

ಹಕ್ಕಿಗಳನ್ನು ನಿರೀಕ್ಷಿಸುವಾಗ ಬೈನೋಕುಲರ್ ಲಭ್ಯವಾದಲ್ಲಿ ಉಪಯೋಗಿಸಲು ಮರೆಯದಿರಿ.

ಯಾವೆಲ್ಲಾ ವಿಷಯಗಳನ್ನು ನಿರೀಕ್ಷಿಸಬೇಕು?

- ಹಕ್ಕಿ ಕಂಡುಬರುವ ಸ್ಥಳ
- ಕಂಡುಬಂದ ಸಮಯ
- ಗಾತ್ರ
- ಬಣ್ಣ
- ಗೂಡು
- ಶಬ್ದ
- ಕಾಲುಗಳ ಗಾತ್ರ, ಬೆರಳುಗಳ ಸಂಖ್ಯೆ, ಬಣ್ಣ, ಉದ್ದ
- ಕಣ್ಣುಗಳ ಗಾತ್ರ ಮತ್ತು ಬಣ್ಣ
- ಗರಿಗಳ ವಿಶೇಷತೆ
- ಹಾರುವ ರೀತಿ
- 
- 
- 

ನಿಮ್ಮ ಪರಿಸರದಲ್ಲಿರುವ ಯಾವುದಾದರೂ ಒಂದು ಹಕ್ಕಿಯನ್ನು ನಿರೀಕ್ಷಿಸಿ ಅದರ ವಿಶೇಷತೆಗಳನ್ನು ಒಳಗೊಂಡ ಟಿಪ್ಪಣಿ ತಯಾರಿಸಿರಿ. ಚಿತ್ರವನ್ನು ಬಿಡಿಸಲು ಮರೆಯದಿರಿ.

ನಿರೀಕ್ಷಣಾ ಟಿಪ್ಪಣಿಯಲ್ಲಿ ಏನೆಲ್ಲಾ ಸೇರಿಸಬಹುದು?

ಸೈರಾಳ ನಿರೀಕ್ಷಣಾ ಟಿಪ್ಪಣಿಯನ್ನು ನೋಡಿರಿ.

## ನಿರೀಕ್ಷಣಾ ಟಿಪ್ಪಣಿ



**ಹಕ್ಕಿಯ ಹೆಸರು** : ಗಿಳಿ.

**ಕಂಡುಬಂದ ಸ್ಥಳ** : ಬಯಲಿನ ಬದಿ.

**ಕಂಡುಬಂದ ಸಮಯ** : ಸಂಜೆ.

**ಬಣ್ಣ** : ಹಸಿರು.

**ಕೊಕ್ಕಿನ ವಿಶೇಷತೆ** : ಚೂಪಾದ ಬಾಗಿದ ಕೆಂಪು ಬಣ್ಣದ ಕೊಕ್ಕು.

**ಕಾಲುಗಳ ವಿಶೇಷತೆ** : ಮರಕ್ಕೆ ಹತ್ತಲು ಮತ್ತು ಆಹಾರ ವಸ್ತುಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳಲು ಸಹಾಯ ಮಾಡುವ ಸಪೂರವಾದ ಕಾಲುಗಳು.

**ಬಾಲದ ವಿಶೇಷತೆ** : ತ್ರಿಕೋನಾಕೃತಿಯಲ್ಲಿರುವ ಉದ್ದವಾದ ಬಾಲ.

**ಇತರ ವಿಶೇಷತೆಗಳು** :
- ಕುತ್ತಿಗೆಯಲ್ಲಿ ಗುಲಾಬಿ ಬಣ್ಣದ ಬಳೆ ಇದೆ.
- ಮರದ ಪೊಟರೆಯಲ್ಲಿ ಮೊಟ್ಟೆ ಇಡುತ್ತದೆ.

## ಪೂರ್ತಿಗೊಳಿಸುವ

ಅತಿ ದೊಡ್ಡ ಹಕ್ಕಿ..........................................................................................

ಹಿಂದಕ್ಕೆ ಹಾರುವ ಹಕ್ಕಿ ..........................................................................................

ಅತಿ ಎತ್ತರದಲ್ಲಿ ಹಾರುವ ಹಕ್ಕಿ ..........................................................................

ಹಾರಲು ಸಾಧ್ಯವಾಗದ ಹಕ್ಕಿಗಳು ......................................................................

ಅತಿ ಚಿಕ್ಕ ಹಕ್ಕಿ ..........................................................................................

# ಆಹಾರ - ಹಲವು ವಿಧ




ಎಲ್ಲಾ ಹಕ್ಕಿಗಳ ಆಹಾರ ಒಂದೇ ರೀತಿ ಆಗಿದೆಯೇ?

| ಹಕ್ಕಿ | ಆಹಾರ |
|---|---|
| ಗಿಳಿ | ಧಾನ್ಯಗಳು, ................................................................ |
| ಮಿಂಚುಳ್ಳಿ | ಮೀನು, ................................................................ |
| ಹದ್ದು | ................................................................ |
| .................................... | ................................................................ |
| .................................... | ................................................................ |
| .................................... | ................................................................ |


ನೀರು ನಿಂತಿರುವ ಪ್ರದೇಶಗಳಲ್ಲಿ ನಾವು ಕೊಳ್ಳೆ ಹಿಡಿಯುತ್ತೇವೆ.


ಕೊಳ್ಳೆಯನ್ನು ಅಟ್ಟಿಸಿ ಹಿಡಿಯುವುದು ನನಗಿಷ್ಟ...


ಹುಲ್ಲಿನ ಬೀಜಗಳನ್ನು ಮತ್ತು ಧಾನ್ಯಗಳನ್ನು ಕುಕ್ಕಿ ತಿನ್ನುವುದು ನನಗಿಷ್ಟ.


ನಾನು ಹಣ್ಣು ತಿನ್ನುವವರ ಗುಂಪಿಗೆ ಸೇರಿದ್ದೇನೆ...

ಪ್ರತಿಯೊಂದು ಹಕ್ಕಿಯೂ ತಿನ್ನುವ ಆಹಾರ ಪದಾರ್ಥಗಳು ಯಾವುವು?

ಅವುಗಳನ್ನು ಕಂಡುಹಿಡಿದು ಬರೆಯಿರಿ. ಇನ್ನೂ ಹೆಚ್ಚಿನ ಹಕ್ಕಿಗಳ ಹೆಸರುಗಳನ್ನು ಗೂಡುಗಳಲ್ಲಿ ಬರೆಯಿರಿ.















ಎಲ್ಲಾ ಗೂಡುಗಳಲ್ಲಿರುವ ಹಕ್ಕಿಗಳ ಗಾತ್ರ ಮತ್ತು ಶರೀರದ ರಚನೆ ಒಂದೇ ರೀತಿ ಆಗಿದೆಯೇ? ಹಕ್ಕಿಗಳಿಗೆ ಆಹಾರ ಸಂಪಾದನೆಗಿರುವ ಹೊಂದಾಣಿಕೆಗಳು ಯಾವುವೆಂದು ಬರೆಯಿರಿ.

## ಗೆರೆ ಎಳೆದು ಜೋಡಿಸಿರಿ.

ಪ್ರತಿಯೊಂದು ಹಕ್ಕಿಯ ಕೊಕ್ಕು ಮತ್ತು ಕಾಲುಗಳನ್ನು ಪರಸ್ಪರ ಗೆರೆ ಎಳೆದು ಜೋಡಿಸಿರಿ.












## ಹಕ್ಕಿಗಳೂ ವಾಸಸ್ಥಳಗಳೂ..

ಹಕ್ಕಿಗಳು ಯಾವ ಯಾವ ಪ್ರದೇಶಗಳಲ್ಲಿ ಕಾಣ ಸಿಗುತ್ತವೆ?

- ಕೊಳದ ಬದಿಯಲ್ಲಿ
- 
- 

ನೀರು ನಿಂತ ಸ್ಥಳಗಳಲ್ಲಿ ಕಂಡುಬರುವ ಹಕ್ಕಿಗಳು ಯಾವುವು?

..........................................................................................

ಅವುಗಳ ವಿಶೇಷತೆಗಳೇನು?

- ಉದ್ದವಾದ ಕಾಲುಗಳು
- 
- 

- ಎಲ್ಲಾ ಹಕ್ಕಿಗಳ ಶರೀರರಚನೆಯು ಒಂದೇ ರೀತಿಯಾಗಿಲ್ಲ.
- ಕೆಲವು ಹಕ್ಕಿಗಳಿಗೆ ಉದ್ದವಾಗಿ ಚೂಪಾದ ಕೊಕ್ಕುಗಳು ಮತ್ತು ಉದ್ದವಾದ ಕಾಲುಗಳಿವೆ.
- ಆಹಾರ ಸಂಪಾದನೆ ಮತ್ತು ಸಂಚಾರ ರೀತಿಯು ಹಕ್ಕಿಗಳ ಶರೀರರಚನೆಗೆ ಅನುಗುಣವಾಗಿವೆ.
- ನೀರು ನಿಂತ ಸ್ಥಳಗಳಲ್ಲಿ ಕೊಳ್ಳೆ ಹಿಡಿಯುವ ಹಕ್ಕಿಗಳಿಗೆ ಎಣ್ಣೆಯ ಅಂಶ ಇರುವ ಗರಿಗಳಿರುತ್ತವೆ.



### ನಿಶಾಚರಿಗಳು

**ಗೂಬೆಗಳು ಹಗಲು ನಿದ್ರಿಸಿ ರಾತ್ರಿ ಸಂಚರಿಸುವವುಗಳಾಗಿವೆ. ರಾತ್ರಿ ಆಹಾರ ಸಂಪಾದಿಸಲು ಮತ್ತು ಶಬ್ದ ಇಲ್ಲದೆ ಹಾರಲು ಸಹಕರಿಸುವ ವಿಶಿಷ್ಟ ರೀತಿಯ ಗರಿಗಳು ಇವುಗಳಿಗಿವೆ. ಚಿಕ್ಕ ಜೀವಿಗಳನ್ನು ಬೇಟೆಯಾಡುವ ಕಾಡುಗೂಬೆಗಳು, ಇಲಿ ಮತ್ತು ಹೆಗ್ಗಣಗಳನ್ನು ತಿನ್ನುವ ಬಿಳಿಗೂಬೆಗಳು, ಮೀನುಗಳನ್ನು ಹಿಡಿಯುವ ಮೀನು ಗೂಬೆಗಳು, ಚಿಕ್ಕ ಇಲಿಗಳನ್ನು ಹಿಡಿಯುವ ನತ್ತುಂಗ ಹಕ್ಕಿ ಮೊದಲಾದವುಗಳು ರಾತ್ರಿ ಸಂಚರಿಸುವವುಗಳಾಗಿವೆ.**



# ಪಕ್ಷಿಗಳೂ ಗೂಡುಗಳೂ..

ನಮ್ಮ ಸುತ್ತಮುತ್ತಲಿರುವ ಹಕ್ಕಿಗಳ ಗೂಡುಗಳನ್ನು ಗಮನಿಸಿರುವಿರಾ.

ಅವುಗಳು ಯಾವೆಲ್ಲ ರೀತಿಯಲ್ಲಿ ಭಿನ್ನವಾಗಿವೆ ಎಂದು ಬರೆದು ಪೂರ್ತಿಗೊಳಿಸಿರಿ.




# ಮೊಟ್ಟೆಗಳು ಹಲವು ವಿಧ

ಚಿತ್ರವನ್ನು ಗಮನಿಸಿರಿ. ಈ ಮೊಟ್ಟೆಗಳು ಯಾವ ಹಕ್ಕಿಯದ್ದಾಗಿವೆ ಎಂದು ಕೆಳಗೆ ಬರೆಯಿರಿ.








ಹಕ್ಕಿಗಳ ಮೊಟ್ಟೆಗಳು ಯಾವೆಲ್ಲ ರೀತಿಯಲ್ಲಿ ವ್ಯತ್ಯಾಸ ಹೊಂದಿವೆ?

- ಗಾತ್ರ
- 
- 

ವಿವಿಧ ರೀತಿಯ ಹಕ್ಕಿಗಳ, ಅವುಗಳ ಗೂಡುಗಳ ಹಾಗೂ ಮೊಟ್ಟೆಗಳ ಚಿತ್ರಗಳನ್ನು ಸಂಗ್ರಹಿಸಿ ವಿಶೇಷತೆಗಳನ್ನು ಸೇರಿಸಿ ಸಂಚಿಕೆಯನ್ನು ತಯಾರಿಸಿರಿ...

**ಹಕ್ಕಿಗಳ ಗೂಡುಗಳ ಆಕೃತಿ, ಗಾತ್ರ, ನಿರ್ಮಾಣದ ವಸ್ತುಗಳು, ನಿರ್ಮಿಸುವ ಸ್ಥಳ, ನಿರ್ಮಿಸುವ ರೀತಿ, ಮೊಟ್ಟೆಗಳು ಇತ್ಯಾದಿಗಳಲ್ಲಿ ವೈವಿಧ್ಯವಿದೆ.**

## ಉಷ್ಟ್ರ ಪಕ್ಷಿಯೂ ಮೊಟ್ಟೆಯೂ



ಜಗತ್ತಿನಲ್ಲಿ ಇಂದು ಜೀವಿಸಿರುವ ಪಕ್ಷಿಗಳಲ್ಲಿ ಅತಿ ದೊಡ್ಡ ಪಕ್ಷಿಯಾದ ಉಷ್ಟ್ರ ಪಕ್ಷಿಯ ಮೊಟ್ಟೆಯು ಅತಿ ದೊಡ್ಡ ಮೊಟ್ಟೆಯಾಗಿದೆ. ರೆಕ್ಕೆಗಳಿದ್ದರೂ ಹಾರಲು ಸಾಧ್ಯವಾಗದ ಉಷ್ಟ್ರ ಪಕ್ಷಿಯ ಮೊಟ್ಟೆಯ ಭಾರ ಅಂದಾಜು ಒಂದುವರೆ ಕಿಲೋಗ್ರಾಂ ಇರಬಹುದು. ಉಷ್ಟ್ರ ಪಕ್ಷಿಯು ನೆಲದಲ್ಲಿ ಜೀವಿಸುವವುಗಳಲ್ಲಿ ಅತಿ ದೊಡ್ಡ ಕಣ್ಣಿರುವ ಪಕ್ಷಿಯಾಗಿದೆ.

# ವಲಸೆ ಹಕ್ಕಿಗಳು



ಹಸಿರೆಲೆ ಉಳಿಯಕ್ಕಿ



ನವರಂಗ



ರಾಜಹಕ್ಕಿ



ಹಳದಿಗಿಳಿ



ಹೊನ್ನಗೊರವ



ಅಡವಿ ಸಿಪಿಲೆ

ಚಿತ್ರದಲ್ಲಿರುವ ಹಕ್ಕಿಗಳು ನಮಗೆ ಕಾಣಸಿಗುತ್ತವೆಯೇ? ಇವುಗಳ ಶಬ್ದ ಯಾವಾಗಲೂ ಕೇಳಿಸುತ್ತದೆಯೇ? ಕಾರಣ ಏನಾಗಿರಬಹುದು?

ಪ್ರತಿಕೂಲ ಹವಾಮಾನದಿಂದ ರಕ್ಷಣೆ ಪಡೆಯಲು, ಆಹಾರಕ್ಕಾಗಿ ಮತ್ತು ವಂಶಾಭಿವೃದ್ಧಿಗಾಗಿ ಕೆಲವು ಹಕ್ಕಿಗಳು ಗುಂಪಾಗಿ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹೋಗುತ್ತವೆ. ಹವಾಮಾನ ಅನುಕೂಲಕರವಾದಾಗ ಅವುಗಳು ಪುನಃ ಹಿಂತಿರುಗುತ್ತವೆ. ಇಂತಹ ಹಕ್ಕಿಗಳನ್ನು ವಲಸೆ ಹಕ್ಕಿಗಳೆನ್ನುವರು.

ಹೆಚ್ಚಿನ ವಲಸೆ ಹಕ್ಕಿಗಳ ಹೆಸರುಗಳನ್ನು ಕಂಡುಹಿಡಿದು ಬರೆಯಿರಿ. ಚಿತ್ರಗಳನ್ನು ಸಂಗ್ರಹಿಸಿ **ಪರಿಸರ ಮೂಲೆಯ 'ಬರ್ಡ್ ಕಾರ್ನರ್'** ನಲ್ಲಿ ಅಂಟಿಸಿರಿ.



## ಪಕ್ಷಿಗಳೂ ಪರಿಸರವೂ



ಕೆಲವು ಕಟ್ಟಡಗಳ ಮೇಲೆ ಅಶ್ವತ್ಥಮರ ಬೆಳೆದು ನಿಂತಿರುವುದನ್ನು ನೀವು ಗಮನಿಸಿರುವಿರಾ? ಅವುಗಳನ್ನು ಯಾರಾದರೂ ನೆಟ್ಟು ಬೆಳೆಸಿರುವರೇ?

ಹಕ್ಕಿಗಳಿಂದ ಏನೆಲ್ಲಾ ಉಪಯೋಗಗಳಿವೆ?



- ಬೀಜ ಪ್ರಸಾರ
-
-

## ನೀರನ್ನು ಹುಡುಕುತ್ತಾ...

ಬೇಸಗೆಯಲ್ಲಿ ಜಲಮೂಲಗಳು ಬತ್ತಿಹೋಗುವಾಗ ಹಕ್ಕಿಗಳು ಮತ್ತು ಮೃಗಗಳು ದಾಹವನ್ನು ತೀರಿಸುವುದು ಹೇಗಾಗಿರಬಹುದು?

ಬೇಸಗೆಯಲ್ಲಿ ಬರಗಾಲ ಮತ್ತು ತಾಪದಿಂದ ರಕ್ಷಣೆ ಪಡೆಯಲು ಹಕ್ಕಿಗಳಿಗೆ ನೀರು ಒದಗಿಸಬೇಕು. ಇದಕ್ಕಾಗಿ ಮರದಲ್ಲಿ ಅಥವಾ ನೆರಳಿರುವ ಇತರ ಕಡೆಗಳಲ್ಲಿ ಮಣ್ಣಿನ ಪಾತ್ರೆಗಳಲ್ಲಿ ನೀರನ್ನು ತುಂಬಿಸಿಡಬೇಕು. ಸೊಳ್ಳೆಗಳು ಮೊಟ್ಟೆ ಇಡದಂತೆ ಆಗಾಗ ನೀರನ್ನು ಬದಲಾಯಿಸಬೇಕು....



ಹಕ್ಕಿಗಳಿಗೆ ನೀರು ಮತ್ತು ಆಹಾರ ಲಭಿಸುವ ಒಂದು ತಾಣವನ್ನು ನಿಮ್ಮ ಶಾಲೆಯಲ್ಲಿ ನಿರ್ಮಿಸಿರಿ.

## ಗ್ರೇಟ್ ಹಾರ್ನ್ ಬಿಲ್ ವಂಶನಾಶದೆಡೆಗೆ...

‘ಕಾಡಿನ ಕೃಷಿಕ’ ಎಂದು ಕರೆಯಲ್ಪಡುವ ಕೇರಳದ ರಾಜ್ಯ ಪಕ್ಷಿ ಗ್ರೇಟ್ ಹಾರ್ನ್ ಬಿಲ್ ವಂಶನಾಶದ ಭೀತಿಯಲ್ಲಿದೆ.



ಗ್ರೇಟ್ ಹಾರ್ನ್ ಬಿಲ್, ಗುಬ್ಬಚ್ಚಿ ಮುಂತಾದ ಹಕ್ಕಿಗಳ ಸಂಖ್ಯೆ ಇತ್ತೀಚೆಗೆ ಕಡಿಮೆಯಾಗುತ್ತಾ ಬರುತ್ತಿದೆ. ಇದಕ್ಕೆ ಕಾರಣಗಳೇನಾಗಿರಬಹುದು?

- ಆಹಾರದ ಕೊರತೆ.
- ಎತ್ತರದ ಮರಗಳ ಅಭಾವ.
- ಮನುಷ್ಯನ ಹಸ್ತಕ್ಷೇಪ.
- 
- 
- 

'ರೆಡ್ ಡಾಟಾ ಬುಕ್' **(Red Data Book)** ವಂಶ ನಾಶಭೀತಿಯನ್ನು ಎದುರಿಸುವ ಜೀವಿಗಳ ಹೆಸರುಗಳನ್ನು ದಾಖಲಿಸಿರುವ ಪುಸ್ತಕವಾಗಿದೆ.

ವಂಶ ನಾಶ ಭೀತಿಯನ್ನು ಎದುರಿಸುತ್ತಿರುವ ಕೇರಳದ ಇತರ ಪಕ್ಷಿಗಳ ಹೆಸರುಗಳನ್ನು **ನನ್ನ ಪರಿಸರ ಅಧ್ಯಯನ ಪುಸ್ತಕ**ದಲ್ಲಿ ಬರೆಯಿರಿ.

ಅವುಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಮ್ ತಯಾರಿಸಿರಿ.



# ಪಕ್ಷಿ ಶಾಸ್ತ್ರಜ್ಞರು

ಸಲೀಂಗೆ ಹತ್ತು ವರ್ಷ ಪ್ರಾಯವಿದ್ದಾಗ ಮಾವ ಬಹುಮಾನವಾಗಿ ನೀಡಿದ್ದ ಏರ್ ಗನ್ ಉಪಯೋಗಿಸಿ ಹಳದಿ ಗುಬ್ಬಚ್ಚಿ ಹಕ್ಕಿಯೊಂದಕ್ಕೆ ಗುಂಡು ಹಾರಿಸಿದ್ದರು. ಈ ಹಕ್ಕಿಯನ್ನು ತೆಗೆದುಕೊಂಡು ಸಲೀಂ ತನ್ನ ಮಾವನೊಂದಿಗೆ ಅವರ ಗೆಳೆಯನಾದ ಬೋಂಬೆ (ಮುಂಬೈ) ನ್ಯಾಚುರಲ್ ಹಿಸ್ಟರಿ ಸೊಸೈಟಿಯಲ್ಲಿ ಉದ್ಯೋಗಿಯಾಗಿದ್ದ ಡಬ್ಲ್ಯು. ಎಸ್.ಮಿಲಾಡ್ ರನ್ನು ಸಂದರ್ಶಿಸಿದರು. ಅವರು ಸೊಸೈಟಿಯಲ್ಲಿ ಸಂಸ್ಕರಿಸಿ ಸಂರಕ್ಷಿಸಿದ್ದ ಹಕ್ಕಿಗಳ ಸಂಗ್ರಹವನ್ನು ಸಲೀಂಗೆ ಪರಿಚಯಿಸಿದರು. ಅವುಗಳಲ್ಲಿ ಸಲೀಂ ಗುಂಡು ಹಾರಿಸಿದ್ದ ಹಳದಿ ಗುಬ್ಬಚ್ಚಿ ಹಕ್ಕಿಗಳೂ ಇದ್ದುವು. ಈ ಘಟನೆಯು ಮುಂದೆ ಸಲೀಂ ಅವರನ್ನು ಓರ್ವ ಪಕ್ಷಿಪ್ರೇಮಿಯಾಗಿ ಪರಿವರ್ತಿಸಿತು.



ಇದು ಭಾರತದ ಅತಿ ಪ್ರಸಿದ್ಧ ಪಕ್ಷಿ ಶಾಸ್ತ್ರಜ್ಞ ಡಾಕ್ಟರ್ ಸಲೀಂ ಅಲಿಯ ಆತ್ಮಕಥೆಯಾಗಿದೆ.

ಇವರ ಹುಟ್ಟುಹಬ್ಬದ ದಿನವಾದ **ನವೆಂಬರ್ 12** ನ್ನು **ರಾಷ್ಟ್ರೀಯ ಪಕ್ಷಿ ನಿರೀಕ್ಷಣಾ ದಿನ**ವನ್ನಾಗಿ ನಾವು ಆಚರಿಸುತ್ತೇವೆ.

ನಿಮಗೆ ತಿಳಿದಿರುವ ಇತರ ಪಕ್ಷಿ ನಿರೀಕ್ಷಕರಿದ್ದಾರೆಯೇ? ಹೆಚ್ಚಿನ ವಿವರಗಳನ್ನು ಸಂಗ್ರಹಿಸಿ ಬರೆಯಿರಿ.



ಕೆ ಕೆ ನೀಲಕಂಠನ್ (ಇಂದುಚೂಡನ್)



ಡಾ. ಆರ್. ಸುಗದನ್

ಪಕ್ಷಿಗಳ ಕುರಿತಾದ ಅಧ್ಯಯನ ನಡೆಸುವ ವಿಜ್ಞಾನದ ಶಾಖೆಯಾಗಿದೆ ಪಕ್ಷಿ ಶಾಸ್ತ್ರ **(Ornithology).**

## ಪಕ್ಷಿಧಾಮ

ಡಾ ಸಲೀಂ ಅಲಿಯವರ ಹೆಸರಿನಲ್ಲಿ ಕೇರಳದಲ್ಲಿರುವ ಪಕ್ಷಿ ನಿರೀಕ್ಷಣಾ ಕೇಂದ್ರವಾಗಿದೆ ತಟ್ಟೇಕಾಡ್ ಪಕ್ಷಿಧಾಮ.

ಇತರ ಪಕ್ಷಿಧಾಮಗಳ ಕುರಿತು ನಿಮಗೆ ತಿಳಿದಿದೆಯೇ?

**ಪದಬಂಧವನ್ನು ಪೂರ್ತಿಗೊಳಿಸಿರಿ.**

| | | | | |
|---|---|---|---|---|
| 1 ಕು | | | | |
| 3 ತ | | 4 ಮಂ | | |
| | | | | |
| | 2 ಚೂ | ಳ | | |
| | | | | 5 |
| | | | | |
| | | | | ಲುಂ |
| | | | | |

**ಬಲಕ್ಕೆ**

1. ಕೋಟ್ಟಯಂ ಜಿಲ್ಲೆಯಲ್ಲಿರುವ ಒಂದು ಪಕ್ಷಿಧಾಮ.
2. ಕೇರಳದಲ್ಲಿರುವ ಏಕೈಕ ನವಿಲು ಸಂರಕ್ಷಣಾ ಕೇಂದ್ರ.

**ಕೆಳಕ್ಕೆ**

3. ಡಾ. ಸಲೀಂ ಅಲಿ ಪಕ್ಷಿಧಾಮ ಎಂದು ಕರೆಯಲ್ಪಡುವುದು.
4. ಕಾಂಡ್ಲಾ ಕಾಡುಗಳಲ್ಲಿ ಕಂಡುಬರುವ ಕೇರಳದ ಏಕೈಕ ಪಕ್ಷಿಧಾಮ ಕೇಂದ್ರ.
5. ವಲಸೆ ಹಕ್ಕಿಗಳು ಹೆಚ್ಚಾಗಿ ಕಾಣುವ ಕೋಝಿಕ್ಕೋಡ್ ಜಿಲ್ಲೆಯಲ್ಲಿರುವ ಪಕ್ಷಿಧಾಮ.

ಇನ್ನೂ ಹೆಚ್ಚು ಪಕ್ಷಿ ಸಂಕೇತಗಳ ಕುರಿತು ವಿವರಗಳನ್ನು ಸಂಗ್ರಹಿಸಿ **ನನ್ನ ಪರಿಸರ ಅಧ್ಯಯನ ಪುಸ್ತಕ**ದಲ್ಲಿ ದಾಖಲಿಸಿರಿ.



ಕಾಗೆ, ಕೋಳಿ, ಮೈನ, ನವಿಲು, ಕೊಂಬು ಕೊಕ್ಕಿನ ಹಕ್ಕಿ, ಸಣ್ಣ ಮಡಿವಾಳ ಹಕ್ಕಿ, ಮುಂತಾದ ಲಕ್ಷಗಟ್ಟಲೆ ಹಕ್ಕಿಗಳು ಇರುವ ಜೀವಲೋಕ. ಮಧುರವಾದ ಶಬ್ದ, ವೈವಿಧ್ಯಮಯ ಬಣ್ಣ, ವಿವಿಧ ರೀತಿಯ ಸಂಚಾರ ಪಥಗಳಿಂದ ತುಂಬಿರುವ ಹಕ್ಕಿಗಳು ಇನ್ನೂ ಅದೆಷ್ಟೋ!

ಅನ್ವೇಷಣೆ ಮಾಡಿ ಕಂಡುಹಿಡಿಯುತ್ತಾ ರೆಕ್ಕೆ ಇರುವ ಗೆಳೆಯರ ಲೋಕಕ್ಕೆ ಕುತೂಹಲಕರ ಪ್ರಯಾಣವನ್ನು ನಾವು ಮುಂದುವರಿಸುವ..

## ಮೌಲ್ಯಮಾಪನ

1. ಹಕ್ಕಿಗಳು ಮತ್ತು ಅವುಗಳ ಆಹಾರವನ್ನು ಕಂಡುಹಿಡಿದು ಪರಸ್ಪರ ಸರಿಯಾದ ಹಾದಿಯ ಮೂಲಕ ಜೋಡಿಸಿರಿ.



2. ಹಾಯ್.. ಇದು ಮರಕುಟಿಗವೇ? ಕೊಳದ ಬದಿಯಲ್ಲಿರುವ ಗಿಳಿಯನ್ನು ಕಂಡು ರೋಬಿ ಕೂಗಿ ಕೇಳಿದನು. "ಮಿಂಚುಳ್ಳಿಯ ಕೊಕ್ಕು ಈ ರೀತಿಯಲ್ಲ." ಅಯಾನ್ ಉತ್ತರಿಸಿದ. ಈ ಪಕ್ಷಿ ಯಾವುದು? ಸೂಕ್ತವಾದ ಬಣ್ಣವನ್ನು ಹಚ್ಚಿ ಚಿತ್ರವನ್ನು ಅಂದಗೊಳಿಸಿರಿ.



ವಿಶೇಷತೆಗಳನ್ನು ಸೇರಿಸಿ ಟಿಪ್ಪಣಿಯನ್ನು ತಯಾರಿಸಿರಿ.

3. ಮನು ಮತ್ತು ಅಬಿನ್ ಪಟ್ಟಿಯನ್ನು ಪೂರ್ತಿಗೊಳಿಸಿ ಆಟವಾಡುತ್ತಿದ್ದರು. ಅವರೊಂದಿಗೆ ಸೇರಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಹಕ್ಕಿಯ ಹೆಸರು | ಬಣ್ಣ | ಆಹಾರ | ಶಾರೀರಿಕ ವಿಶೇಷತೆಗಳು | ಗೂಡಿನ ಪ್ರತ್ಯೇಕತೆಗಳು |
|---|---|---|---|---|
| ಗಿಳಿ | | | | |
| | ಕಪ್ಪು | | | |
| | | ಚಿಕ್ಕ ಜೀವಿಗಳು | | |
| | | | ಉದ್ದವಾದ ಕೊಕ್ಕು | |
| ಮರ ಕುಟಿಗ | ಹಸಿರು ಮಿಶ್ರಿತ ಹಳದಿ / ಹಳದಿ ಮಿಶ್ರಿತ ಬೂದು | ಕೀಟಗಳು, ಹುಳಗಳು | ಚೂಪಾದ ಕೊಕ್ಕು ತಲೆಯಲ್ಲಿ ಕೆಂಪು ಜುಟ್ಟು | ಪೊಟರೆಯಲ್ಲಿ |

## ಮುಂದುವರಿದ ಚಟುವಟಿಕೆಗಳು

1. **ಆಲ್ಬಂ ನಿರ್ಮಿಸುವ.**

   ವಿವಿಧ ಹಕ್ಕಿಗಳ ಚಿತ್ರ ಬಿಡಿಸಿ ಅಥವಾ ಅಂಟಿಸಿ **ಪಕ್ಷಿ ಆಲ್ಬಂ** ತಯಾರಿಸಿರಿ.



2. ವಿವಿಧ ಹಕ್ಕಿಗಳ ಗರಿಗಳನ್ನು ಸಂಗ್ರಹಿಸಿ ಅವುಗಳನ್ನು ಜೋಡಿಸಿ ವಿವಿಧ ರೂಪಗಳನ್ನು ತಯಾರಿಸಿರಿ.

3. "ಪರಿಸರ ಸಂರಕ್ಷಣೆಯಲ್ಲಿ ಹಕ್ಕಿಗಳ ಪಾತ್ರ" - ಕಿರು ನಾಟಕವನ್ನು ತರಗತಿಯಲ್ಲಿ ಪ್ರದರ್ಶಿಸಿರಿ.

# ಕಲಾಕೇರಳ

## 4







ಇಂದು ಮೊದಲ ಬಾರಿ ನನಗೆ ಶಾಲಾ ಕಲೋತ್ಸವದಲ್ಲಿ ಎರಡು ಬಹುಮಾನಗಳು ಸಿಕ್ಕಿದುವು. ಜಾನಪದ ನೃತ್ಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಮತ್ತು ಲಘು ಸಂಗೀತದಲ್ಲಿ ದ್ವಿತೀಯ ಸ್ಥಾನ.

4ನೇ ತರಗತಿಯ ಸಹಪಾಠಿಗಳು ಪ್ರದರ್ಶಿಸಿದ ನಾಟಕಕ್ಕೆ ಪ್ರಥಮ ಸ್ಥಾನ ಲಭಿಸಿತು. ಸನೂಜನ ಭಾಷಣ ಮತ್ತು ನಿಳಾಳ ಏಕಪಾತ್ರಾಭಿನಯ ನನಗೆ ತುಂಬಾ ಇಷ್ಟವಾಯಿತು.

ನೀತುವಿನ ದಿನಚರಿಯನ್ನು ಓದಿದಿರಲ್ಲವೇ.

ನೀತುವಿಗೆ ಯಾವೆಲ್ಲ ಸ್ಪರ್ಧೆಗಳಲ್ಲಿ ಬಹುಮಾನ ಲಭಿಸಿತು?

ಶಾಲಾ ಕಲೋತ್ಸವದಲ್ಲಿ ಯಾವೆಲ್ಲ ಸ್ಪರ್ಧೆಗಳನ್ನು ನಡೆಸುತ್ತಾರೆ?

ವೇದಿಕೆಯಲ್ಲಿ ನಡೆಯುವ ಸ್ಪರ್ಧೆಗಳು ಯಾವುವು? ವೇದಿಕೇತರ ಸ್ಪರ್ಧೆಗಳು ಯಾವುವು?

ಪಟ್ಟಿ ಮಾಡಿರಿ.



ಕಲೋತ್ಸವದಲ್ಲಿ ಜಯಗಳಿಸಿದವರ ಫೋಟೋಗಳನ್ನು ಪತ್ರಿಕೆಯಲ್ಲಿ ನೋಡಿದ ನಿಳಾ ಅಮ್ಮನಲ್ಲಿ ಕೇಳಿದಳು : ಅಮ್ಮಾ, ತಿರುವಾದಿರಕಳಿಯನ್ನು ಹುಡುಗಿಯರು ಮಾತ್ರ ಪ್ರದರ್ಶಿಸುವುದೇ?

ಅಮ್ಮ : "ಹೌದು ಮಗಳೇ, ತಿರುವಾದಿರಕಳಿ ಸ್ತ್ರೀಯರ ಸಮೂಹ ನೃತ್ಯವಾಗಿದೆ.

ಧನುಮಾಸದಲ್ಲಿ ತಿರುವಾದಿರ ಆಚರಣೆಯ ಅಂಗವಾಗಿ ಇದನ್ನು ಪ್ರದರ್ಶಿಸಲಾಗುವುದು. ಉರಿಯುವ ಕಾಲುದೀಪದ ಸುತ್ತಲೂ ನಿಂತು ಕೈತಟ್ಟಿಕೊಂಡು ನೃತ್ಯ ಮಾಡುತ್ತಾರೆ."



ತಿರುವಾದಿರಕಳಿ

ನಿಳಾ : ಅಮ್ಮಾ, ಕಲೋತ್ಸವದಲ್ಲಿ ಮಾರ್ಗಂಕಳಿ ಪ್ರದರ್ಶಿಸಿದಾಗ ಕಾಲುದೀಪ ಉರಿಸಿದ್ದಾರಲ್ಲ?

ಅಮ್ಮ : ಹೌದು. ಮಾರ್ಗಂಕಳಿ ನೃತ್ಯದಲ್ಲೂ ಮಧ್ಯದಲ್ಲಿ ಕಾಲುದೀಪ ಉರಿಸಿ ಇಡುತ್ತಾರೆ. ಕ್ರೈಸ್ತಧರ್ಮದ ಚರಿತ್ರೆಯನ್ನು ವಿವರಿಸುವ ಹಾಡುಗಳನ್ನು ಮಾರ್ಗಂಕಳಿಯಲ್ಲಿ ಹಾಡಲಾಗುತ್ತದೆ. ಮೇಲ್ವಸ್ತ್ರ ಮತ್ತು ಮುಂಡು ಮಾರ್ಗಂಕಳಿಯ ವೇಷ ಭೂಷಣಗಳಾಗಿವೆ. ತಿರುವಾದಿರಕಳಿಗೆ ಕೇರಳೀಯ ವಸ್ತ್ರಧಾರಣೆ ಮಾಡಬೇಕು.



ಮಾರ್ಗಂಕಳಿ

ಅಮ್ಮ : ಸ್ತ್ರೀಯರು ವೃತ್ತಾಕಾರವಾಗಿ ನಿಂತು ನೃತ್ಯ ಮಾಡುವ ಬೇರೆ ಯಾವುದಾದರೂ ಕಲಾ ರೂಪ ತಿಳಿದಿದೆಯೇ?

ನಿಳಾ : ಒಪ್ಪನ ಹಾಗೂ ವಟ್ಟಪ್ಪಾಟ್ ಗಳನ್ನು ಕೂಡಾ ವೃತ್ತಾಕಾರದಲ್ಲಿ ನಿಂತು ಪ್ರದರ್ಶಿಸುತ್ತಾರೆ.

ಅಮ್ಮ : ಹೌದು. ಮುಸ್ಲಿಂ ಸಮುದಾಯದಲ್ಲಿ ಪ್ರಚಾರದಲ್ಲಿರುವ ಒಪ್ಪನ ಹಾಗೂ ವಟ್ಟಪ್ಪಾಟ್ ಗಳನ್ನು ವೃತ್ತಾಕಾರವಾಗಿ ನಿಂತು ಪ್ರದರ್ಶಿಸಲಾಗುತ್ತದೆ. ಒಪ್ಪನ ಕುಣಿಯುವಾಗ ಒಬ್ಬರು ಮಧ್ಯದಲ್ಲಿ ಕುಳಿತುಕೊಳ್ಳುವುದನ್ನು ನೋಡಿಲ್ಲವೇ?

ನಿಳಾ : ಅದು ಮದುಮಗಳಲ್ಲವೇ?

ಅಮ್ಮ : ಹೌದು. ಒಪ್ಪನ ವಿವಾಹ ಸಮಾರಂಭಗಳಲ್ಲಿ ಮಾಡುವ ಸಮೂಹ ನೃತ್ಯವಾಗಿದೆ. ವಧುವಿನ ಸುತ್ತಲೂ ನಿಂತು ಇದನ್ನು ಪ್ರದರ್ಶಿಸಲಾಗುತ್ತದೆ.

ವಟ್ಟಪ್ಪಾಟ್ ನ್ನು ಪ್ರದರ್ಶಿಸುವುದು ಯಾರೆಂದು ತಿಳಿದಿದೆಯೇ?



ಒಪ್ಪನ

ನಿಳಾ : ಅದು ಹುಡುಗರಲ್ಲವೇ?

ಅಮ್ಮ : ಹೌದು, ಪುರುಷರು ವಟ್ಟಪ್ಪಾಟ್ ಪ್ರದರ್ಶಿಸುತ್ತಾರೆ. ಆದುದರಿಂದ ಇದನ್ನು ಹುಡುಗರ ಒಪ್ಪನ ಎಂದು ಕರೆಯುತ್ತಾರೆ.

ನಿಳಾ : ಅಮ್ಮಾ, ಮಂಗಳಂಕಳಿಯಲ್ಲೂ ವೃತ್ತಾಕಾರವಾಗಿ ಅಲ್ಲವೇ ನೃತ್ಯ ಮಾಡುವುದು. ಪತ್ರಿಕೆಯಲ್ಲಿ ಅದರ ಚಿತ್ರ ಇದೆಯಲ್ಲವೇ.

ಅಮ್ಮ : ಮಂಗಳಂಕಳಿಯು ಕಾಸರಗೋಡು ಹಾಗೂ ಕಣ್ಣೂರು ಜಿಲ್ಲೆಯಲ್ಲಿ ಪ್ರಚಾರದಲ್ಲಿರುವುದು.

ಇದು ಕೂಡ ವಿವಾಹ ಸಮಾರಂಭಗಳಲ್ಲಿ ಪ್ರದರ್ಶಿಸುವ ಕಲಾ ರೂಪವಾಗಿದೆ.



ಮಂಗಳಂಕಳಿ

ನಿಳಾ : ಮಂಗಳಂಕಳಿಯು ಮಹಿಳೆಯರು ಮಾಡುವ ನೃತ್ಯವಲ್ಲವೇ?

ಅಮ್ಮ : ಮಂಗಳಂಕಳಿಯನ್ನು ಪ್ರಧಾನವಾಗಿ ಮಹಿಳೆಯರ ಗುಂಪು ಪ್ರದರ್ಶಿಸುವುದು. ಇದರಲ್ಲಿ ಪುರುಷರು ಚಪ್ಪಾಳೆ ತಟ್ಟುತ್ತಾ ಹಾಡುತ್ತಾರೆ. ಇದನ್ನು ವಿವಾಹ ಆಟ ಎಂದೂ ಕರೆಯುತ್ತಾರೆ.

ಬಳಿಕ ದಕ್ಷಿಣ ಕೇರಳದಲ್ಲಿ ಪ್ರಚಾರದಲ್ಲಿರುವ ವಿಲ್ಲಡಿಚಾನ್ ಪಾಟ್ ನ ಕುರಿತು ಅಮ್ಮ ವಿವರಿಸಿದರು.

"ವಾದ್ಯೋಪಕರಣವಾಗಿ ತಯಾರು ಮಾಡಿದ ದೊಡ್ಡ ಬಿಲ್ಲು, ಕೊಡ, ಗೆಜ್ಜೆ ಕಟ್ಟಿರುವ ಕೋಲು ಎಂಬಿವುಗಳನ್ನು ಉಪಯೋಗಿಸಿ ತಾಳ ಹಾಕಿ ವಿಲ್ಲಡಿಚಾನ್ ಹಾಡು ಪ್ರದರ್ಶಿಸುವರು. ಆಂಗಿಕ ಚಲನೆ ಮತ್ತು ಅಭಿನಯವನ್ನು ಸೇರಿಸಿ ಹಾಡಿಗೆ ಮೆರುಗು ನೀಡುತ್ತಾರೆ."



ವಿಲ್ಲಡಿಚಾನ್ ಪಾಟ್

- ಕೇರಳೀಯ ವೇಷ ಧರಿಸಿದ ಸ್ತ್ರೀಯರು ವೃತ್ತಾಕಾರವಾಗಿ ನಿಂತು ಹಾಡು ಹೇಳಿ ತಿರುವಾದಿರಕಳಿ ಆಡುತ್ತಾರೆ.
- ಮಾರ್ಗಂಕಳಿಯಲ್ಲಿ ಕ್ರೈಸ್ತ ಮತದ ಚರಿತ್ರೆ ವಿವರಿಸುವ ಹಾಡನ್ನು ಹಾಡುತ್ತಾರೆ.
- ಮದುಮಗನ ಗುಣನಡತೆಗಳನ್ನು ಮದುಮಗಳ ಮುಂದೆ ಒಪ್ಪನ ಹಾಡಿನ ಮೂಲಕ ತಿಳಿಸಲಾಗುತ್ತದೆ.
- ಬೇಟೆ, ಕಸುಬು, ಅನುಷ್ಠಾನ ಎಂಬಿತ್ಯಾದಿ ಜೀವನಕ್ಕೆ ಸಂಬಂಧಿಸಿದ ಯಾವುದೇ ವಿಚಾರಗಳು ಮಂಗಳಂಕಳಿ ಹಾಡಿನ ವಿಷಯವಾಗಬಹುದು.
- ವಿಲ್ಲಡಿಚಾನ್ ಪಾಟ್ ವಂದನಾ ಹಾಡಿನೊಂದಿಗೆ ಆರಂಭಿಸಲಾಗುವುದು. ಬಳಿಕ ಕಥಾ ಹಾಡನ್ನು ಹಾಡುತ್ತಾರೆ.

## ತೈಯ್ಯಂ



**ತೈಯ್ಯಂ, ಕಲಾಪ್ರಜ್ಞೆ ಮತ್ತು ದೇವರ ಭಕ್ತಿಯನ್ನು ಒಳಗೊಂಡ ಅನುಷ್ಠಾನ ಕಲೆಯಾಗಿದೆ. ಉತ್ತರ ಕೇರಳದಲ್ಲಿ ತೈಯ್ಯಂ ಎಂಬ ಕಲಾ ರೂಪ ಪ್ರಚಾರದಲ್ಲಿದೆ. ಇದನ್ನು ತೈಯ್ಯಾಟ್ಟಂ, ಕಳಿಯಾಟ್ಟಂ ಎಂಬ ಹೆಸರುಗಳಿಂದ ಕರೆಯುತ್ತಾರೆ. ದೈವ ಎಂಬ ಪದದಿಂದ ತೈಯ್ಯಂ ಎಂಬ ಪದದ ಉತ್ಪತ್ತಿಯಾಯಿತೆಂಬ ಅಭಿಪ್ರಾಯವಿದೆ. ಆದ್ದರಿಂದ ತೈಯ್ಯಾಟವನ್ನು ದೈವದ ಕೋಲ (ರೂಪ) ಕಟ್ಟಿದ ಆಟ ಎಂದು ಹೇಳಬಹುದು. ನಿರ್ದಿಷ್ಟವಾದ ಒಂದು ಪ್ರದರ್ಶನ ರೀತಿ ತೈಯ್ಯಾಟ್ಟಂಗೆ ಇದೆ. ಇದು ದೈವ ಸಂಕಲ್ಪಕ್ಕೆ ಪ್ರಾಧಾನ್ಯ ಇರುವ ಕಲೆಯಾಗಿದೆ. ಇದರ ಪ್ರಧಾನ ವಾದ್ಯ ಚೆಂಡೆಯಾಗಿದೆ. ಅದಲ್ಲದೆ ಮದ್ದಳೆ, ಕೈತಾಳ, ಕೊಂಬುವಾದ್ಯ ಎಂಬಿವುಗಳನ್ನೂ ಉಪಯೋಗಿಸುತ್ತಾರೆ. ವಾದ್ಯ ಮೇಳದ ತಾಳಕ್ಕೆ ಅನುಸರಿಸಿ ತೈಯ್ಯಾಟಂ ನಡೆಯುವುದು.**

ಕೆಳಗೆ ಕೊಟ್ಟಿರುವ ಪದಬಂಧವನ್ನು ಕೊಟ್ಟಿರುವ ಚಿತ್ರ ಮತ್ತು ನಿರ್ದೇಶಗಳಿಗೆ ಅನುಸಾರವಾಗಿ ಭರ್ತಿಗೊಳಿಸಿರಿ.

| | | | | | | | |
|---|---|---|---|---|---|---|---|
| | | | 1 | | ಳಂ | 7 | |
| | 2 | | | 3 ತ್ರೈ | | | |
| | 4 ಚೆಂ | | ■ | 5 | ಗ್ಯಂ | | |
| 6 | | ವಾ | | | | | |

**ಬಲಕ್ಕೆ**

1. 

2. 

3. 

4. ತೈಯಂಗೆ ಉಪಯೋಗಿಸುವ ಪ್ರಧಾನ ವಾದ್ಯೋಪಕರಣ

5. 

6. 

**ಕೆಳಕ್ಕೆ**

7. 

ಚಿತ್ರದಲ್ಲಿ ಕಾಣುವ ನೃತ್ಯರೂಪಗಳು ಯಾವುವೆಂದು ಕಂಡುಹಿಡಿದು ಬರೆಯಿರಿ.



.........................................



.........................................



.........................................




.........................................

ಈ ಕಲಾ ರೂಪಗಳ ಕುರಿತು ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿ **ನನ್ನ ಪರಿಸರ ಅಧ್ಯಯನ ಪುಸ್ತಕ**ದಲ್ಲಿ ಬರೆಯಿರಿ. ಕಲಾರೂಪಗಳ ಚಿತ್ರಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿರಿ.

ನೀತುವಿಗೆ ಕಲೋತ್ಸವದಲ್ಲಿ ದ್ವಿತೀಯ ಸ್ಥಾನ ಲಭಿಸಿದ್ದು ಯಾವ ಸ್ಪರ್ಧೆಯಲ್ಲಿ?

ಲಘುಸಂಗೀತದಂತೆ ಸಂಗೀತಕ್ಕೆ ಮಾತ್ರ ಪ್ರಾಧಾನ್ಯವಿರುವ ಬೇರೆ ಯಾವೆಲ್ಲ ಸಂಗೀತ ರೂಪಗಳಿವೆ?

- ಕರ್ನಾಟಕ ಸಂಗೀತ
-
-

ಕೆಳಗೆ ನೀಡಿರುವ ಬಾಯಿತಾಳವನ್ನು ಎಲ್ಲರೂ ಸೇರಿ ಹಾಡಿ ನೋಡುವ.

ಓ ತಿತ್ತಿತ್ತಾರ ತಿತ್ತಿತ್ತೈ ತಿತ್ತೈ ತಕ ತೈ ತೈ ತೋಂ.....

ಮುಂದಿನ ಸಾಲುಗಳನ್ನು ಹಾಡಿ ನೋಡಿರಿ.

## ಜಾನಪದ ಹಾಡುಗಳು

**ಜಾನಪದ ಹಾಡುಗಳು ತಲೆಮಾರುಗಳಿಂದ ತಲೆಮಾರಿಗೆ ಬಾಯ್ದೆರೆಯಾಗಿ ಹಾದು ಬಂದ ಹಾಡುಗಳಾಗಿವೆ. ಇವುಗಳು ಸಂಭಾಷಣಾ ರೀತಿಗೆ ಅತಿ ಹತ್ತಿರವಿರುವವುಗಳಾಗಿವೆ. ಇವುಗಳು ಆಯಾಯ ಪ್ರದೇಶದಲ್ಲಿನ ಆಚಾರ ವಿಚಾರಗಳಿಗೆ ಸಂಬಂಧಿಸಿವೆ. ಕೃಷಿ, ಕಸುಬು, ವಿನೋದ, ಆಚಾರ ಇತ್ಯಾದಿ ಅನೇಕ ರೀತಿಯ ಜಾನಪದ ಹಾಡುಗಳಿವೆ.**

## ಶಾಸ್ತ್ರೀಯ ಸಂಗೀತ

ಶಾಸ್ತ್ರೀಯ ಸಂಗೀತವು ನಿರ್ದಿಷ್ಟವಾದ ಆಲಾಪನ ರೀತಿಯಲ್ಲಿ ಶಿಸ್ತುಬದ್ಧವಾಗಿ ಪ್ರದರ್ಶಿಸುವ ಸಂಗೀತ ರೂಪವಾಗಿದೆ. ಭಾರತದಲ್ಲಿ ಶಾಸ್ತ್ರೀಯ ಸಂಗೀತದ ಎರಡು ಪ್ರಕಾರಗಳಾದ ಕರ್ನಾಟಕ ಸಂಗೀತ ಮತ್ತು ಹಿಂದುಸ್ತಾನಿ ಸಂಗೀತಕ್ಕೆ ಕೇರಳ ಅತಿ ಹೆಚ್ಚು ಕೊಡುಗೆಯನ್ನು ನೀಡಿದೆ.

ಸಂಗೀತಜ್ಞನೂ ರಾಜನೂ ಆಗಿದ್ದ ಸ್ವಾತಿ ತಿರುನಾಳ್ ಮಲಯಾಳಂ, ಹಿಂದಿ, ತಮಿಳು, ತೆಲುಗು, ಕನ್ನಡ ಎಂಬೀ ಭಾಷೆಗಳಲ್ಲಿ ಐನೂರಕ್ಕಿಂತಲೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ.

## ಮಾಪಿಳ್ಳ ಪಾಟ್

**ಮಾಪಿಳ್ಳಪಾಟ್ ಗಳು ಮುಸ್ಲಿಂ ಸಮುದಾಯದಲ್ಲಿ ಅತಿ ಹೆಚ್ಚು ಪ್ರಚಾರದಲ್ಲಿರುವ ಹಾಡುಗಳಾಗಿವೆ. ಉತ್ತರ ಕೇರಳದಲ್ಲಿ ಮುಸ್ಲಿಮರು ಉಪಯೋಗಿಸುವ ಪ್ರತ್ಯೇಕ ಮಲಯಾಳಂ ಭಾಷೆಯಲ್ಲಿ (ಅರಬಿಮಲಯಾಳಂ) ಈ ಹಾಡುಗಳನ್ನು ಹೆಚ್ಚಾಗಿ ರಚಿಸಲಾಗಿದೆ. ಇದನ್ನು ಬರೆದವರಲ್ಲಿ ಮೋಯಿನ್ ಕುಟ್ಟಿ ವೈದ್ಯರ್ ಪ್ರಮುಖರಾಗಿದ್ದಾರೆ.**

ಶಾಲಾ ಕಲೋತ್ಸವದಲ್ಲಿ ಪೆನ್ಸಿಲ್ ಡ್ರಾಯಿಂಗ್, ಪೈಂಟಿಂಗ್ ಮೊದಲಾದ ಸ್ಪರ್ಧೆಗಳಲ್ಲಿ ನೀವು ಭಾಗವಹಿಸಿದ್ದೀರಾ?

ಈ ಚಿತ್ರಗಳ ಪರಿಚಯವಿದೆಯೇ?





ಇವುಗಳು ಜಗತ್ಪ್ರಸಿದ್ಧ ಕೇರಳೀಯ ಚಿತ್ರಗಾರ ರಾಜಾರವಿವರ್ಮ ಬಿಡಿಸಿದ ಚಿತ್ರಗಳಾಗಿವೆ. ಆಧುನಿಕ ಚಿತ್ರಕಲೆಯನ್ನು ಕೇರಳದಲ್ಲಿ ಪರಿಚಯಿಸಿದವರು ಇವರಾಗಿದ್ದಾರೆ. ತಂತ್ರಜ್ಞಾನವನ್ನು ಅಳವಡಿಸಿಕೊಂಡು ಇವರ ಚಿತ್ರಗಳಿಗೆ ಚಲನ ಶಕ್ತಿಯನ್ನು ನೀಡಿರುವ ವಿಡಿಯೋವನ್ನು ನೋಡಿರುವಿರಾ?



- ರಾಜಾರವಿವರ್ಮನ ಚಿತ್ರಗಳ ಪ್ರತಿಗಳನ್ನು ಸಂಗ್ರಹಿಸಿ ಶಾಲೆಯಲ್ಲಿ ಒಂದು ಚಿತ್ರ ಪ್ರದರ್ಶನವನ್ನು ಏರ್ಪಡಿಸಿರಿ.

## ಉತ್ಸವಗಳು... ಆಚರಣೆಗಳು...




ತ್ರಿಶೂರ್ ಪೂರಂ ಕೇರಳದ ಪ್ರಧಾನ ಉತ್ಸವಗಳಲ್ಲಿ ಒಂದಾಗಿದೆ.



ನಮಗೂ ಜಾತ್ರೆಗಳಲ್ಲಿ ಭಾಗವಹಿಸಲು ಇಷ್ಟವಲ್ಲವೇ.

ನಿಮ್ಮ ಊರಿನಲ್ಲೂ ಜಾತ್ರೆಗಳಿಲ್ಲವೇ?

ಯಾವುವು?

ಅವುಗಳ ಮಾಹಿತಿಗಳನ್ನು ಸಂಗ್ರಹಿಸಿ ಬಿತ್ತಿಪತ್ರಿಕೆ ತಯಾರಿಸಿರಿ.

ಮಾವೇಲಿ ನಾಡುವಾಣೀಡುಂ ಕಾಲಂ

ಮಾನುಷರೆಲ್ಲಾರುಮೊನ್ನುಪೋಲೆ

ಆಮೋದತ್ತೋಡೆ ವಸಿಕ್ಕುಂ ಕಾಲಂ

ಆಪತ್ತಂಬಾರ್ ಕ್ಕುಂಮೊಟ್ಟಿಲ್ಲತಾನುಂ

ಈ ಓಣಂ ಹಾಡನ್ನು ಕೇಳಿದ್ದೀರಲ್ಲವೇ? ಮುಂದಿನ ಸಾಲುಗಳನ್ನು ಸಂಗ್ರಹಿಸಿ ರಾಗವಾಗಿ ಹಾಡಿರಿ.

ನಿಳಾಳ ಶಾಲೆಯಲ್ಲಿ ಓಣಂ ಆಚರಣೆಯ ಸಂದರ್ಭದ ಚಿತ್ರಗಳನ್ನು ಗಮನಿಸಿರಿ.






ಓಣಂ ನಮ್ಮ ರಾಜ್ಯ ಹಬ್ಬವಾಗಿದೆಯಲ್ಲವೇ.

ನಿಮ್ಮ ಶಾಲೆ ಮತ್ತು ಮನೆಯಲ್ಲಿ ಓಣಂ ಹಬ್ಬವನ್ನು ಹೇಗೆ ಆಚರಿಸುವರು ಎಂಬುದನ್ನು **ನನ್ನ ಪರಿಸರ ಅಧ್ಯಯನ ಪುಸ್ತಕ**ದಲ್ಲಿ ಬರೆಯಿರಿ.

ಚಿತ್ರದಲ್ಲಿ ಕಾಣುವ ಆಚರಣೆಯ ಕುರಿತು ವಿವರಗಳನ್ನು ಸಂಗ್ರಹಿಸಿ ಟಿಪ್ಪಣಿ ತಯಾರಿಸಿ.





ನಿಮಗೆ ಭಾಗವಹಿಸಲು ಇಷ್ಟವಿರುವ ಇತರ ಉತ್ಸವಾಚರಣೆಗಳಿಲ್ಲವೇ? ಅವುಗಳು ಯಾವುವೆಂದು ಪಟ್ಟಿ ಮಾಡಿರಿ. ಗೆಳೆಯರೊಂದಿಗೆ ವಿನಿಮಯ ಮಾಡಿರಿ.

## ಮೌಲ್ಯಮಾಪನ

1. ಜೊತೆಗೊಳಿಸಿರಿ.

| | |
|---|---|
| • ಓಟ್ಟಂತುಳ್ಳಲ್ ನ ಪಿತಾಮಹ | • ರಾಜಾ ರವಿವರ್ಮ |
| • ಮಾಪಿಳ್ಳ ಪಾಟ್ ವಿಭಾಗದ ಪ್ರಮುಖ | • ಸ್ವಾತಿ ತಿರುನಾಳ್ |
| • ವಿಶ್ವವಿಖ್ಯಾತ ಚಿತ್ರಗಾರ | • ಮೋಯಿನ್ ಕುಟ್ಟಿ ವೈದ್ಯರ್ |
| • ಸಂಗೀತಜ್ಞನಾದ ರಾಜ | • ಕುಂಜನ್ ನಂಬಿಯಾರ್ |

2. ಕೇರಳದ ಪ್ರಧಾನ ಪ್ರಾದೇಶಿಕ ಕಲೆಗಳು ಯಾವುವು? ಟಿಪ್ಪಣಿ ತಯಾರಿಸಿರಿ.

## ಮುಂದುವರಿದ ಚಟುವಟಿಕೆಗಳು

1. ಅಧ್ಯಾಪಕರ ಸಹಾಯದಿಂದ ಒಬ್ಬ ಕಲಾಪ್ರತಿಭೆಯನ್ನು ಶಾಲೆಗೆ ಆಮಂತ್ರಿಸಿ ಕಲಾ ಪ್ರದರ್ಶನದ ಆಸ್ವಾದನೆಗೆ ಅವಕಾಶ ನೀಡಿರಿ.
2. ಕೇರಳದ ಕಲಾರೂಪಗಳ ಚಿತ್ರಗಳನ್ನು ಸಂಗ್ರಹಿಸಿ ಕೊಲೇಷ್ ತಯಾರಿಸಿರಿ.
3. ಓಣಂ ಹಬ್ಬಕ್ಕೆ ಸಂಬಂಧಿಸಿದ ಆಟ ಮತ್ತು ಕಲಾರೂಪಗಳನ್ನು ಸೇರಿಸಿಕೊಂಡು ಭಿತ್ತಿಪತ್ರಿಕೆಯನ್ನು ತಯಾರಿಸಿರಿ.

# ಭಾರತದ ಸಂವಿಧಾನ

ಭಾಗ IV ಕ

**ಕರ್ತವ್ಯಗಳು**

**51ಕ. ಮೂಲಭೂತ ಕರ್ತವ್ಯಗಳು - ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

*ಸಂಪರ್ಕಿಸಬೇಕಾದ ವಿಳಾಸ:*

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

ಶ್ರೀ ಗಣೇಶ್, ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ - 34

ದೂರವಾಣಿ 0471 - 2326603

ಇ- ಮೇಲ್: childrightscpcr@kerala.gov.in, rtecpcr@kerala.gov.in

ವೆಬ್ ಸೈಟ್ : www.kescpcrkerala.gov.in.

ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400

ಕೇರಳ ಪೋಲೀಸ್ ಸಹಾಯವಾಣಿ : 0471 - 3243000/44000/45000

*online **R.T.E Monitoring : www.nireekshana.org.in***